## ಸಂತಾಪ ಸೂಚಕ ನಿರ್ಣಯ.

ಅಧ್ಯಕ್ಷರು : ಮಾಜಿ ಶಾಸಕರಾದ ಶ್ರೀ ಎಸ್.ಎಂ. ಮರಿಯಪ್ಪನವರು ದಿನಾಂಕ : 19-7-1997 ರಂದು ನಿಧನರಾದುದನ್ನು ಅತ್ಯಂತ ವಿಷಾದದಿಂದ ಈ ಸದನಕ್ಕೆ ತಿಳಿಸುತ್ತಿದ್ದೇನೆ. ಶ್ರೀಯುತರಾದ ಮರಿಯಪ್ಪನವರು ಸಮಾಜ ಸೇವಕರಾಗಿದ್ದು, ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು ಹಾಗೂ ಹಲವಾರು ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ 1952-57 ರವರೆಗೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿ, ಪಿರಿಯಾಪಟ್ಟಣ ಕೇಂದ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಿದ ಕೀರ್ತಿ ಶ್ರೀಯುತರದಾಗಿರುತ್ತದೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸದನವು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನಾಚರಿಸಿತು).

ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬವರ್ಗದವರಿಗೆ ಕಳುಹಿಸಲಾಗುವುದು.

## ಸಭಾಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯ

### ರಾಜ್ಯದಲ್ಲಿ ವಿದ್ಯುತ್ ದರ ಏರಿಕೆ ಕುರಿತು ನಡೆದ ಧರಣಿ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ತಾವು ಆಸಕ್ತಿ ವಹಿಸಿ, ಇಲ್ಲಿ ಏನು ಒಂದು ಡೆಡ್ ಲಾಕ್ ಕ್ರಿಯೇಟ್ ಆಗಿತ್ತು, ಅದನ್ನು ಬಗೆಹರಿಸಬೇಕೆಂದು ಸಾಕಷ್ಟು ಪ್ರಯತ್ನಪಟ್ಟಿರಿ, ಅದಕ್ಕಾಗಿ ತಮ್ಮ ಪ್ರಯತ್ನಕ್ಕೆ ನಾವು ಅಭಿನಂದಿಸುತ್ತೇವೆ. ಈ ವಿಷಯದ ಬಗ್ಗೆ ಎಲ್ಲಾ ವಿರೋಧ ಪಕ್ಷದ ನಾಯಕರುಗಳನ್ನು ಒಂದು ಕಡೆ ಸೇರಿಸಿ ಚರ್ಚೆ ಮಾಡಿ ಇದಕ್ಕೆ ಯಾವುದಾದರೂ ಪರಿಹಾರ ಕಂಡುಹಿಡಿಯತಕ್ಕಂಥ ಪ್ರಯತ್ನ ಮಾಡೋಣ ಎನ್ನತಕ್ಕಂಥ ಮಾತನ್ನು ತಾವು ಹೇಳಿದ ಮೇಲೆ ತಮ್ಮ ಮಾತಿಗೆ ನಾವು ಮನ್ನಣೆ ಕೊಟ್ಟು, ತಮ್ಮ ಅನಿಸಿಕೆಯನ್ನು ನಾವು ಒಪ್ಪಿಕೊಂಡು ತಾವು ಕರೆದಂಥ ಸಭೆಗೆ ಹಾಜರಾಗಿದ್ದೆವು. ಆದರೆ, ಸರ್ಕಾರ ತನ್ನದೇ ಆದಂಥ ಹಠಮಾರಿತನ ಮತ್ತು ತನ್ನದೇ ಆದಂಥ ಧೋರಣೆಯನ್ನು ಅವಲಂಭಿಸಿದ್ದಕ್ಕಾಗಿ ಈ ಡೆಡ್ ಲಾಕ್ ಕ್ರಿಯೇಟ್ ಆಗಿತ್ತು. ಅದು ಇನ್ನೂ ಸಾಲ್ವ್ ಆಗಲಿಲ್ಲ ಅಥವಾ ಅದಕ್ಕೆ ಪರಿಹಾರ ಕಂಡುಹಿಡಿಯಲಿಕ್ಕಾಗಲಿಲ್ಲ. ನಿನ್ನೆ ದಿವಸ ಹಾಗೂ ರಾತ್ರಿ ಮತ್ತು ಇವತ್ತು ಸತತವಾಗಿ ಧರಣಿಯನ್ನು ಈ ಸದನದಲ್ಲಿ ಎಲ್ಲಾ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು ಮಾಡಿ ಜನರ ಸಮಸ್ಯೆಗೆ ಸ್ಪಂದಿಸಿ ಅದಕ್ಕೆ ಪರಿಹಾರವನ್ನು ಸರ್ಕಾರದಿಂದ ಕೊಡಿಸಬೇಕು ಎನ್ನತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ಅದಕ್ಕಾಗಿ ನಾನು ನಮ್ಮ ಎಲ್ಲಾ ವಿರೋಧ ಪಕ್ಷದ ಶಾಸಕ ಮಿತ್ರರುಗಳಿಗೆ ನಾನು ಅಭಿನಂದಿಸುತ್ತೇನೆ. ಎಲ್ಲಾ ವಿರೋಧ ಪಕ್ಷದ ನಾಯಕರುಗಳು ಮತ್ತು ಸದಸ್ಯರುಗಳು ಇದರ ಬಗ್ಗೆ ಆಸಕ್ತಿ ವಹಿಸಿ ಒಗ್ಗಟ್ಟನ್ನು ತೋರಿಸಿ ದಿನಾಂಕ 30-6-96 ರಂದು ಎಲೆಕ್ಟ್ರಿಸಿಟಿ ಪ್ರೈಸ್‌ಹೈಕ್ ಬಗ್ಗೆ ಹೊರಡಿಸಿರುವ ನೋಟಿಫಿಕೇಷನ್ ಅನ್ನು ವಿತ್‌ಡ್ರಾ ಮಾಡಿ ಕೊಳ್ಳಬೇಕೆಂದು ಎಲ್ಲರೂ ಪ್ರಾಮಾಣಿಕವಾಗಿ

ಒತ್ತಾಯ ಮಾಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಕೆಲವು ವಿಧಾನಗಳನ್ನು ನಾವು ಅನುಸರಿಸಬೇಕಾಗುತ್ತದೆ. ಚರ್ಚೆ ಮುಖಾಂತರ ಕೆಲವು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಅಥವಾ ವಿನಂತಿ ಮಾಡಿಕೊಂಡು ಅಥವಾ ಅರ್ಜಿ ಕೊಟ್ಟು ನಮ್ಮ ಸಮಸ್ಯೆಗಳನ್ನು ಬಗೆಹರಿಸಿ ಎಂದು ಕೇಳಿಕೊಳ್ಳಬಹುದು. ಇದು ಯಾವುದಕ್ಕೂ ಕೂಡ ಬಗೆಹರಿಯದಿದ್ದಾಗ ಅಸೆಂಬ್ಲಿಯಲ್ಲಿ ಬಂದು ಕಾನೂನು ಚೌಕಟ್ಟಿನಲ್ಲಿ ನಾವು ಚರ್ಚೆ ಮಾಡಿ ಒಂದು ರಿಲೀಫ್‌ನ್ನು ಕೇಳತಕ್ಕಂಥಾದ್ದು ಸಹಜವಾದ ಪ್ರಜಾಪ್ರಭುತ್ವದ ತತ್ವ. ಆ ತತ್ವದ ಅಡಿಯಲ್ಲಿ ಈ ಕೆಲಸವನ್ನು ನಾವೆಲ್ಲರೂ ಮಾಡದ್ದೇವೆ. ಅದೇ ರೀತಿಯಾಗಿ ಧರಣಿಯಾಗಲೀ, ವಾಕ್ ಔಟ್ ಆಗಲೀ ಇವು ಯಾವುವೂ ಕಾನೂನು ಬಾಹಿರ ಅಥವಾ ಸಂಸದೀಯ ಕಸ್ಟಮ್ಸ್‌ಗಾಗಲೀ ತದ್ವಿರುದ್ಧ ಇದೆಯೆಂದು ಯಾರೂ ಹೇಳುವುದಕ್ಕಾಗುವುದಿಲ್ಲ. ಈ ತರಹ ಧರಣಿಯನ್ನು ನಾವು ಹೊಸದಾಗಿ ಮಾಡಿಲ್ಲ. ಇದೆಲ್ಲವೂ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಅದೇ ಪದ್ಧತಿಯನ್ನು ನಾವೆಲ್ಲರೂ ಅನುಸರಿಸಿ ಬಹಳ ಶಾಂತ ರೀತಿಯಿಂದ ಎಲ್ಲರೂ ಕುಳಿತು ಯಾವುದೇ ಒಂದು ಕೆಟ್ಟ ಹೆಸರನ್ನು ನಿಮಗೆ ತಾರದೆ ಇಡೀ ಮೂರು ದಿವಸವೂ ನಮ್ಮ ಪ್ರಾಮಾಣಿಕತನದ ಪ್ರತಿಭಟನೆಯನ್ನು ತೋರಿಸಿದ್ದೇವೆ. ಇಷ್ಟಾದರೂ ಕೂಡ ದುಃಖದ ಸಂಗತಿ ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳಾಗಲೀ, ಬೇರೆ ಸಚಿವರುಗಳಾಗಲೀ ಇದರ ಬಗ್ಗೆ ಕಾಳಜಿ ವಹಿಸಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ನಾಣಯ್ಯನವರು ಬಂದಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ನಾಣಯ್ಯನವರು, ಇಡೀ ರಾತ್ರಿ ಅಡ್ಡಾಡುತ್ತಿರುತ್ತಾರೆ. ನಾನು ಅವರ ಬಗ್ಗೆ ಕೇಳುವುದಿಲ್ಲ. ಏಕೆಂದರೆ, ಅವರು ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್, ಅವರ ಕೆಲಸವೇನೆಂದರೆ, ಹೆಚ್ಚು ಕಡಿಮೆ ನಮಗೇ ಅಲ್ಲ, ಅವರಿಗೂ ಜೋಪಾನ ಮಾಡತಕ್ಕಂಥಾದ್ದು, ವಿಶೇಷವಾಗಿ ಈ ಸಂದರ್ಭದಲ್ಲಿ ಅವರಿಗೆ ಹೆಚ್ಚಿನ ಕೆಲಸ ಏಕೆ ಇರುತ್ತದೆಂದರೆ, ಮತ್ತೆ ಅವರವರಲ್ಲೇ ಒಡೆದು ಹೋಗಬಾರದು ಎನ್ನುತಕ್ಕಂಥ ದೃಷ್ಟಿಯಿಂದಲೂ ಕೂಡ ಅವರು ವಾಚ್ ಮಾಡುತ್ತಿರುತ್ತಾರೆ. ಹೇಗಾದರೂ ಮಾಡಿ ಈ ಒಂದು 113 ಜನರನ್ನು ಒಂದು ಕಡೆ ಇಡುವುದೇ ಅವರಿಗೆ ಒಂದು ದೊಡ್ಡ ಕೆಲಸ ಆಗಿದೆ. ಅದಕ್ಕಾಗಿ ಅವರು ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದಾರೆ. ಅವರು ತಮ್ಮ ಕೆಲಸವನ್ನು ತಾವು ಮಾಡಿಕೊಂಡು ಹೋಗುತ್ತಿದ್ದಾರೆ. ನೀವು ಅದನ್ನೆಲ್ಲಾ ಹೇಳುವುದಕ್ಕೆ ಹೋದರೆ ಏನಾಗಿದೆ ಅಂದರೆ ನಿಮಗೆ ಒಬ್ಬೊಬ್ಬರಿಗೂ ನೀವು ಇರಲಿಕ್ಕೆ 3 ಸರ್ಕಾರ ಇದ್ದವು ನಿಮ್ಮದು, ಒಂದು ಬೆಣ್ಣೆ ಸರ್ಕಾರ, ಒಂದು ಮಣ್ಣಿನ ಮಗನ ಸರ್ಕಾರ ಇನ್ನೊಂದನ್ನು ನಾನು ಹೇಳುವುದಿಲ್ಲ, ಏಕೆಂದರೆ ಅವರು ಸಿಟ್ಟಿಗೆ ಬರುತ್ತಾರೆ. ಈಗಾಗಲೇ ಈ ಎರಡು ಸರ್ಕಾರಗಳೂ ಹೋಯಿತು, ಅದಕ್ಕೆ ಈ ಸರ್ಕಾರವು ಕೂಡ ಹೋಗುತ್ತದೆ. ಈ ಚಟುವಟಿಕೆಗಳು ಇದ್ದರೆ ಈ ಸರ್ಕಾರ ಬಹಳ ದಿವಸ ಉಳಿಯುವುದಿಲ್ಲ. ಮಾನ್ಯ ಅಧ್ಯಕ್ಷರೇ, ತಿಳಿದುಕೊಳ್ಳಿ ಇವರು ಕೆಳಗೆ ಇಳಿಯುವುದಕ್ಕೆ ಇದು ಮೊದಲನೇ ಸಿಡಿ. ಈ ಬುನಾದಿಯನ್ನು ಅವರು ತೋಡಿಕೊಂಡಿದ್ದಾರೆ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಹಿರಿಯ ಸದಸ್ಯರು ಆದ ಮಾನ್ಯ ಶಿವಪ್ಪ ಮತ್ತು ಯಡಿಯೂರಪ್ಪ ಮತ್ತು ವೀರಪ್ಪ ಮೋಯ್ಲಿರವರು ಇದ್ದರು ಹಾಗೂ ಈ ಸಾಲಿನಲ್ಲಿ ಕಳೆದಂತಹ

ಅನೇಕ ಇರತಕ್ಕಂತ ಅನೇಕ ಸುಮಾರು 26-27 ವರ್ಷ ಹಾಗೂ 30 ವರ್ಷ ಈ ಸದನದಲ್ಲಿ ಶಾಸಕರು ಇಲ್ಲಿ ಇದ್ದರು. ಅವರನ್ನು ಭೇಟಿ ಆಗತಕ್ಕಂಥ ಸೌಜನ್ಯ ಕೂಡ ನೀವು ತೋರಿಸಿಲ್ಲಾ ಅಂದರೆ ನಾವು ಇವರಿಗೆ ಏನು ಹೇಳಬೇಕು? ಶಾಸಕರ ಬಗ್ಗೆ ಆಗಲಿ, ಅಥವಾ ವಿರೋಧ ಪಕ್ಷದ ಬಗ್ಗೆ ಆಗಲಿ ಇವರಿಗೆ ಗೌರವ ಇದೆ ಎಂದು ಹೇಳೋಣ ಅಥವಾ ಏನನ್ನಾದರೂ ಮಾಡಿಕೊಳ್ಳುತ್ತಾರೆ ಅವರ ಪಾಡಿಗೆ, ನಮ್ಮ ಕೆಲಸ ಏನು ಇದೆ ಅದನ್ನು ಮಾಡಿಕೊಂಡು ಹೋಗುತ್ತಿದ್ದೇವೆ ಎಂದು ಅವರು ತಿಳಿದುಕೊಂಡಿರಬಹುದು. ಇಲ್ಲಿ ರಾತ್ರಿ 12 ಗಂಟೆವರೆಗೆ ಡಿಬೇಟ್ ನಡೆಯಿತು, ಹಿಂದೆ ನಡೆದ 8 ಗಂಟೆ ಚರ್ಚೆ ಏನು ದೊಡ್ಡದೇನಲ್ಲ. ಇರಲಿ, ನಿಮ್ಮ ಕೆಲಸ ನೀವು ಮಾಡಿದ್ದೀರಿ, ಊಟ ಮಾಡಿ ಮಲಗಿದ್ದೀರಿ ಪರವಾಗಿಲ್ಲ. ನಾನು ಹೇಳುವುದು ಇಷ್ಟೇ ಅಧ್ಯಕ್ಷರೆ, ಇಷ್ಟೊಂದು ಪ್ರಾಮಾಣಿಕವಾಗಿ ಮತ್ತು ಯಾರೂ ಕೂಡ ಒಂದು ಅಹಿತಕರ ಘಟನೆ ಮಾಡತಕ್ಕಂಥದ್ದಾಗಲಿ ಅಥವಾ ಕಾನೂನು ಕೈಗೆ ತೆಗೆದು ಕೊಂಡು ಸರ್ಕಾರಕ್ಕೆ ಅವಹೇಳನ ಮಾಡತಕ್ಕಂಥದಾಗಲಿ ಮಾಡಿಲ್ಲ. ತಾವು ಏನು ವಿಶ್ವಾಸವನ್ನು ಈ ಸದನದ ಸದಸ್ಯರ ಮೇಲೆ ಇಟ್ಟಿದ್ದೀರಿ, ಯಾರೂ ಕೂಡ ತಮ್ಮ ಪ್ರತಿಷ್ಠೆಗೆ ಆಗಲಿ ಅಥವಾ ಸದನದ ಪ್ರತಿಷ್ಠೆಗೆ ಚ್ಯುತಿತರುವ ಕೆಲಸ ಮಾಡಿಲ್ಲ. ಏಕೆ ಎಂದರೆ ಒಂದೇ ಒಂದು ಪ್ರಾಮಾಣಿಕ ಪ್ರಯತ್ನ ಏನೆಂದರೆ ಯಾವುದೇ ಒಂದು ರೀತಿಯಿಂದ ಸುಮಾರು ಹೋದ ವರ್ಷ 420 ಕೋಟಿ ರೂಪಾಯಿ ಇವರು ಕರವನ್ನು ಜಾಸ್ತಿ ಮಾಡಿದರು ಈ ಟಾರೀಫನ್ನು ಈ ಸಾರಿಯೂ ಕೂಡ ತರಾತುರಿಯಲ್ಲಿ ಅದು ಒಪ್ಪಿಕೊಂಡು ಆದ ಮೇಲೆ ಕೆಲವೇ ದಿವಸದಲ್ಲಿ ಸುಮಾರು 390 ಕೋಟಿ ರೂಪಾಯಿ ಹೆಚ್ಚಿಗೆ ಟಾರೀಫನ್ನು ಹೆಚ್ಚಿಗೆ ಮಾಡಿದರು. ಇದು ನ್ಯಾಯವಲ್ಲ ಸರಿಯಲ್ಲ, ನೀವು ಬಡವರ ಮೇಲೆ ಹಾಕಿರತಕ್ಕಂಥ ಟ್ಯಾಕ್ಸ್, ಇದು ನೀವು ರೈತರ ಮೇಲೆ ಹಾಕಿದಂತಹ ಒಂದು ಹೈಕ್ ಮತ್ತು ಅನೇಕ ಸಣ್ಣಪುಟ್ಟ ಉದ್ದಿಮೆದಾರರು ಇದ್ದಾರೆ ಇವತ್ತು ಆದರ ಮೇಲೆ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಅವರೇನೂ 5-10 ಜನರಿಗೆ ಕೆಲಸ ಕೊಡುವ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಅವರೇ ಸ್ವಂತ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಅದು ಅಲ್ಲದೆ ನಿಮ್ಮ ಇಂಡಸ್ಟ್ರಿಗಳೇ ಇವತ್ತು ಕೋಟ್ಯಾಂತರ ರೂಪಾಯಿ ಲಾಸ್‌ನಲ್ಲಿ ಇದೆ. ಪಬ್ಲಿಕ್ ಅಂಡರ್ ಬೆಕಿಂಗ್ ಕಂಪನಿಗಳಲ್ಲಿ ಅಂದರೆ ಸೋಪ್ಸ್ ಅಂಡ್ ಡಿಟರ್ಜಂಟ್ ಅಥವಾ ಎನ್.ಜಿ.ಎಫ್. ಇರಬಹುದು, ಅನೇಕ ಕಂಪನಿಗಳು ಇವೆ, ನಾನು ಇವತ್ತು ಹೆಸರು ಹೇಳುವುದಿಲ್ಲ. ಈ ರೀತಿ ಇರುವಾಗ ಪುನಃ ಈ ಒಂದು ಕರ ಭಾರವನ್ನು ಎಲ್ಲಿ ಎಂಪ್ಲಾಯ್‌ಮೆಂಟ್ ಜನರೇಷನ್ ಇದೆ ಅಥವಾ ಹೆಚ್ಚಿನ ಎಪ್ಲಾಯ್‌ಮೆಂಟ್ ಕೊಡತಕ್ಕಂಥ ಸಾಧ್ಯತೆ ಇದೆ ಅಲ್ಲೂ ಕೂಡ ನೀವು ಆ ಕೆಲಸ ಮಾಡಿರುತ್ತೀರಿ. ನಿಮ್ಮ ವಿದ್ಯುತ್ ದರವನ್ನು ಏರಿಸಿದ್ದೀರಿ ಇದನ್ನು ಯಾರಿಗೂ ಕೂಡ ಬಿಟ್ಟಿಲ್ಲ. 52 ಸಾವಿರ ಹಳ್ಳಿಗಳಲ್ಲಿ ಅಂದರೆ 28000 ರೆವಿನ್ಯೂ ವಿಲೇಜ್‌ಗಳಲ್ಲಿ ಸುಮಾರು 24 ಹ್ಯಾಮ್‌ಲೆಟ್ಸ್ ಅಂಡ್ ತಾಂಡಾಸ್ ಇರತಕ್ಕಂಥ ಹಳ್ಳಿಗಳಿಗೂ ಇದು ವಿಸ್ತರಣೆಯಾಗಿದೆ. ಏಕೆಂದರೆ ಭಾಗ್ಯ ಜ್ಯೋತಿಯನ್ನು ಸಹ ಬಿಟ್ಟಿಲ್ಲ ಅದಕ್ಕೆ ನೀವು ಏನು ಹೇಳಿದ್ದೀರಿ ಅದಕ್ಕೆ ನಾವು ರಿಯಾಯ್ತಿ ಕೊಡಬೇಕೆಂದು ಮಾಡಿದ್ದೇವೆ ಎಂದು ಹೇಳಿದ್ದೀರಿ, ಅದು ಯಾವಾಗ ಮಾಡಿದಿರಿ? ಈ ಯೋಜನೆ ಹೇಳಿದ್ದು ಯಾವಾಗ? ನಾವು ಧರಣಿಗೆ ಬಂದಮೇಲೆ, ನಾವೆಲ್ಲಾ ಹಟ ಹಿಡಿದಮೇಲೆ ಅಥವಾ ನಾವು ಇದು ಕೇಳಿದಾಗ, ಇದು ತಪ್ಪಾಗಿದೆ

ಎಂಬ ಭಾವನೆ ನಿಮ್ಮ ಮನಸ್ಸಿನಲ್ಲಿ ಇತ್ತಲ್ಲಾ, ನೀವು ಇದನ್ನು ಇಷ್ಯೂ ಮಾಡಿದ್ದು ಯಾವಾಗ, ಒಂದು 20 ದಿವಸ ಹಿಂದೆ ಅಂದರೆ 30-6-97 ರಂದು ಇಷ್ಯೂ ಮಾಡಿದಂತಹ ನೋಟಿಫಿಕೇಷನ್ನು ಅದು ತಪ್ಪು ಇದೆಯೋ ಅಥವಾ ಸರಿ ಇದೆಯೋ ಎಂದು ನೋಡತಕ್ಕಂಥ ಪುರುಸೊತ್ತು ನಿಮಗೆ ಇಲ್ಲ ಅಂದರೆ ನಾವು ಏನು ಹೇಳೋಣ? ಈಗ ಇದನ್ನು ರೈಸ್ ಮಾಡಿದ ಮೇಲೆ ಹೇಳುತ್ತೀರಿ ಅದರಲ್ಲಿ ಕೆಲವು ವ್ಯತ್ಯಾಸ ಆಗಿದೆ ಸರಿಪಡಿಸಬೇಕೆಂದು. ಅಂದರೆ ನಾವು ಹೇಳತಕ್ಕಂಥದ್ದು ಸರಿ ಇದೆ ಎಂಬುದು ಅರ್ಥ ಆಗಿದೆ, ಅದರಲ್ಲಿ ಏನು ನ್ಯೂನತೆಗಳು ಇವೆ, ತಪ್ಪುಗಳು ಇವೆ, ಅದರಿಂದ ಏನೋ ಕೆಲವು ಜನರಿಗೆ ತೊಂದರೆ ಆಗುತ್ತಿದೆ ಅಥವಾ ಕೆಲವು ಜನರಿಗೆ ನೇರವಾಗಿ ಶೋಷಣೆ ಆಗುತ್ತದೆ ಅದನ್ನು ತಪ್ಪಿಸಬೇಕು ಎಂಬುದನ್ನು ನಾವೇನು ಕೇಳಿಕೊಂಡಿದ್ದೇವೆ, ನಮ್ಮ ಮಾತಿಗೆ ತಾವು ಗೇಲಿ ಹಾಕುತ್ತೀರಿ. ನಮ್ಮ ಮಾತಿಗೆ ಸುಮ್ಮನೆ ರಾಜಕೀಯವಾಗಿ ಹೇಳುತ್ತಿದ್ದಾರೆ ಪಾಯಿಂಟ್ ಸ್ಕೋರ್ ಮಾಡಬೇಕು ಎಂದು ಹೇಳುತ್ತಾರೆ, ಪ್ರತಿ ಸಲ ಇವರದ್ದು ಇದ್ದೇ ಇರುತ್ತದೆ ಎಂದು ಹೇಳುತ್ತೀರಿ ಹೋದ ಸಲ ಬಸ್ ರೇಟ್ ಜಾಸ್ತಿ ಆದಾಗ ಸದನ ಸಮಿತಿ ಮಾಡಿದೆವು, ಈ ಸಾರಿ ಇದು ಆಯಿತು, ಇದಕ್ಕೂ ಸದನ ಸಮಿತಿ ಮಾಡಿದೆವು ಎಷ್ಟು ಸಲ ಮಾಡುವುದು? ಇದು ಒಂದು ಮಾತು ಬಿಟ್ಟರೆ ಅಂದರೆ ಪ್ರತಿಷ್ಠೆ ಪ್ರಶ್ನೆ ಮಾಡಿಕೊಂಡು ನೀವು ಇವತ್ತು ಇದನ್ನು ಇಟ್ಟುಕೊಂಡಿದ್ದೀರಿ. ಅಂದರೆ ಸಾರ್ವಜನಿಕವಾಗಿ ಅದರಲ್ಲಿ ತಪ್ಪು ಇದೆ ಎಂದು ಒಪ್ಪಿಕೊಂಡ ಮೇಲೆ, ನಾವು ಏನು ತಮ್ಮ ಮುಂದೆ ಬೇಡಿಕೆ ಇಟ್ಟಿದ್ದೇವೆ, ಈ ನೋಟಿಫಿಕೇಷನ್ ವಿತ್‌ಡ್ರಾ ಮಾಡಿಕೊಳ್ಳಿ ಎಂದು ಕೇಳಿದ್ದೇವೆ. ಅದನ್ನು ಏಕೆ ಒಪ್ಪುತ್ತಿಲ್ಲ ಎಂಬುದು ನಮಗೆ ಗೊತ್ತಾಗುತ್ತಿಲ್ಲ ಯಾವಾಗ ನೀವೇ ಅದನ್ನು ಒಪ್ಪಿಕೊಳ್ಳುವುದಿಲ್ಲ, ಸಾಕಷ್ಟು ಅದರಲ್ಲಿ ನ್ಯೂನತೆ ಇದೆ ಅಥವಾ ತೊಂದರೆಗಳು ಇವೆ ನಾವು ಸರಿ ಮಾಡಿಕೊಳ್ಳಬೇಕೆಂದು ನೀವೇ ಹೇಳುವಾಗ ನೀವು ಆ ನೋಟಿಫಿಕೇಷನ್ನು ಅಬೆಯನ್ಸ್‌ನಲ್ಲಿ ಇಡಿ ಎಂದರೆ ಇಡುವುದಕ್ಕೆ ಸಮಯವಿಲ್ಲ, ಏಕೆಂದರೆ ಇದು ಪ್ರತಿಷ್ಠೆ ಪ್ರಶ್ನೆ. ನನಗೆ ಅದು ಗೊತ್ತಾಗಿದೆ, ಕೆಲವು ಜನ ಅವರಲ್ಲಿಗೆ ಹೋಗಿ ಕಿವಿಯಲ್ಲಿ ಸ್ವಾಮಿ ನೀವು ಇದೇ ರೀತಿ ಈಲ್ಡಾಗುತ್ತಾ ಹೋದರೆ ನಮ್ಮ ಪಾರ್ಟಿನೇ ನಿರ್ನಾಮ ಆಗುತ್ತದೆ, ಅದಕ್ಕೆ ಈ ಕೆಲಸ ಮಾಡುವುದೇ ಬೇಡ, ಅವರು ಏನೇ ಮಾಡಿಕೊಳ್ಳಲಿ, ಎಷ್ಟೇ ಅವರು ಕೂಗಲಿ ಅಥವಾ ಆರ್ಗ್ಯುಮೆಂಟ್ ಮಾಡಲಿ ಅದು ರೀಸನಬಲ್ ಅಥವಾ ರ್‍ಯಾಷನಲ್ ಇದ್ದರೂ ಕೂಡ ನೀವು ಮಾತ್ರ ಇರ್‌ರ್‍ಯಾಷನಲ್ ವೇ ನಲ್ಲಿಯೇ ವಿಚಾರ ಮಾಡಬೇಕೆಂದು ಹೇಳಿಕೊಟ್ಟಿದ್ದಾರೆ. ಅದಕ್ಕಾಗಿ ಅವರು ಇದರ ಕಡೆಗೆ ಗಮನವನ್ನೇ ಕೊಟ್ಟಿಲ್ಲ. ನಾವು ಇಲ್ಲಿ ಧರಣಿ ನಿಂತಾಗ ನಮ್ಮ ಮೊದಲನೇ ವಾಕ್ಯ ಏನು ಎಂದರೆ ನೀವು ನೋಟಿಫಿಕೇಷನ್ ವಿತ್‌ಡ್ರಾ ಮಾಡಿಕೊಳ್ಳಿ ಎಂಬುದು ನಾನು ಅವರು ಮಾಡುವುದಿಲ್ಲ ಎಂಬ ವಾಕ್ಯದಿಂದಲೇ ಪ್ರಾರಂಭ ಮಾಡಿದರು, ಕೊನೇ ಪಕ್ಷ ಎಲ್ಲಾ ಹೇಳಿ, ಕೇಳಿ, ಕೊನೆಗಾದರೂ ವಿತ್‌ಡ್ರಾ ಮಾಡಿಕೊಳ್ಳುವುದಿಲ್ಲ ಈ ಕಾರಣಕ್ಕಾಗಿ ಎಂದು ಹೇಳಲಿಲ್ಲ ಅವರು, ಅವರ ಮೊದಲನೇ ವಾಕ್ಯವೇ ನಾನು ನೋಟಿಫಿಕೇಷನ್ ವಿತ್‌ಡ್ರಾ ಮಾಡಿಕೊಳ್ಳುವುದಿಲ್ಲ, ನೀವು ಏನೇ ಹೇಳಿ, ಏನೇ ಮಾಡಿ ನಿಮ್ಮ ಹಾದಿ ನಿಮಗೆ, ನಮ್ಮ ಹಾದಿ ನಮಗೆ ಎನ್ನತಕ್ಕಂಥ ಧಾಟಿಯಲ್ಲಿ ಅವರು ನೆನ್ನೆ ಹೇಳಿ ಎಲ್ಲಿಗೆ ಹೋಲಿಸಿದರು ಎಂದರೆ ನಾವೇನೋ ನಮ್ಮ ಮನೆಗೆ ಕನ್ಸೆಷನ್ ತೆಗೆದುಕೊಳ್ಳುತ್ತಿದ್ದೇವೇನೋ, ವೈಯಕ್ತಿಕ ಲಾಭಕ್ಕೆ ಕೇಳುತ್ತಿದ್ದೇವೇನೋ ಅಥವಾ ದೊಡ್ಡ

ಇಂಡಸ್ಟ್ರಿಯಲಿಸ್ಟ್ ನಮ್ಮ ಬೀಗರು, ನೆಂಟರು ಇದ್ದಾರೇನೂ ಅಥವಾ ಅವರ ಲಂಚ ಹೊಡೆದು ಕೊಂಡು ಅವರು ಏನು ಹೇಳಿದರು ಅಂದರೆ ದೊಡ್ಡ ಇಂಡಸ್ಟ್ರಿಯಲಿಸ್ಟ್‌ಗಳ ಪರವಾಗಿ ನೀವು ಲಾಬಿ ಮಾಡುತ್ತಿದ್ದೀರಿ, ಬಡವರ ಬಗ್ಗೆ ನಿಮಗೆ ಚಿಂತೆ ಇಲ್ಲ, ರೈತರ ಬಗ್ಗೆ ನಿಮಗೆ ಕಾಳಜಿ ಇಲ್ಲ ಎನ್ನತಕ್ಕಂಥ ಮಾತನ್ನು ಸ್ವಾಮಿ ಈ ಸದನದಲ್ಲಿ ಹೇಳಿದ್ದಾರಲ್ಲಾ, ಅವರ ಹೃದಯ ಮುಟ್ಟಿಕೊಂಡು ಹೇಳಲಿ ಈ ಮಾತನ್ನು ಈ ಕಡೆ ಯಾರಾದರೂ ಇಂಡಸ್ಟ್ರಿಯಲಿಸ್ಟ್ ಲಾಬಿ ಮಾಡುವುದಕ್ಕೆ ಏನಾದರೂ ಕರೆಂಟ್‌ಗೆ ಅರ್ಜಿ ಕೊಟ್ಟಿದ್ದಾರಾ, ಎನಾನ್ಸ್ ಮಾಡಿ ಎಂದು ಅಥವಾ ಯಾರಾದರೂ ಬಾಕಿ ಹಣ ಇದ್ದರೆ ಸ್ಟೇ ಕೊಡಿ ಎಂದು ಹೇಳಿ ನಿಮ್ಮ ಹತ್ತಿರ ಬಂದಿದ್ದರಾ ಇವತ್ತು ಏನಾದರೂ ಹೇಳಬೇಕು, ನೋಟಿಫಿಕೇಷನ್ ಅನ್ನು ಸಿನಿಮಾ ಟಿಕೇಟ್‌ಗೆ ಹೋಲಿಸುತ್ತೀರೋ? 820 ಕೋಟಿ ರೂಪಾಯಿ ಟಾರಿಫ್ಫ್ ಹೈಕ್ ಮಾಡಿ 8 ತಿಂಗಳಿನಲ್ಲಿ ಅದನ್ನು ತಡೆಹಿಡಿಯಿರಿ ಅಂದರೆ ಇದೇನು ಸಿನಿಮಾ ಟಿಕೇಟ್ ತಡೆಹಿಡಿಯುವುದಕ್ಕೆ ಎಂದು ಹೇಳುತ್ತೀರಿ. ನೀವು ಈಗಾಗಲೇ ಅನೇಕ ನೋಟಿಫಿಕೇಷನ್‌ಗಳನ್ನು ವಿತ್‌ಡ್ರಾ ಮಾಡಿದ್ದೀರಿ. ಈ ಕಡೆ ನೀವು ಟೆಂಡರ್‌ಗಳನ್ನು ಕಾಲ್‌ಫಾರ್ ಮಾಡುತ್ತೀರಿ. ಆ ಕಡೆಯಿಂದ ಕ್ಯಾನ್ಸಲ್ ಮಾಡುತ್ತೀರಿ, ಮತ್ತು ಈ ಕಡೆ ಟ್ರಾನ್ಸ್‌ಫರ್ ಮಾಡುತ್ತೀರಿ ಹಾಗೇ ಆ ಕಡೆ ನೋಟಿಫಿಕೇಷನ್ ಕ್ಯಾನ್ಸಲ್ ಮಾಡುತ್ತೀರಿ. ನಿಮಗೆ ಬೇಕಾದ ಯಾವುದೇ ಒಂದು ಕೆಲಸ ಇತ್ತು ಎಂದರೆ ಅದಕ್ಕೆ ಒಂದು ನೋಟಿಫಿಕೇಷನ್ ಮುಂಜಾನೆ ಹೊರಡಿಸುವುದು, ಮದ್ಯಾಹ್ನ ಕ್ಯಾನ್ಸಲ್ ಮಾಡುವುದು, ಈ ರೀತಿಯ ಉದಾಹರಣೆಗಳು ತುಂಬಾ ಇವೆ. ಅಂದರೆ ನಿಮಗೆ ಬೇಕಾದಾಗ ನೀವು ಏನು ಬೇಕಾದರೂ ಮಾಡಬಹುದು. ಜನರ ಹಿತದೃಷ್ಟಿಯಿಂದ, ಸಾಮಾನ್ಯ ರೈತರ ಹಿತದೃಷ್ಟಿಯಿಂದ ನಾವು ಕೇಳುವಾಗ ನೀವು ಈ ಮಾತನ್ನು ಹೇಳಿ, ನಾವೇನು. as if ನಾವು ಏಜೆಂಟ್ ಆಗಿ ಬಂದಿದ್ದೇವೆ ಎನ್ನತಕ್ಕಂಥ ರೀತಿಯಲ್ಲಿ ಮಾತನಾಡುತ್ತೀರಿ. ಈ ರೀತಿ ಹೇಳಿದಾಗ ಬಹಳ ಜನರು ನಕ್ಕಿದರು, ನೀವೆಲ್ಲಾ ರೈತರ ಮಕ್ಕಳಾದರೆ ನಾವೇನು ಮಾರವಾಡಿಗಳ ಮಕ್ಕಳಾ ಎಂದು ಹೇಳಿದ ಕೂಡಲೇ ಬಹಳ ಜನ ನಕ್ಕಿದರು. ಸ್ವಾಮಿ ನೀವು ಮಾರವಾಡಿಗಳ ಮಕ್ಕಳು ಎಂದು ಯಾರೂ ಹೇಳಲಿಲ್ಲ, ಆದರೆ you have mortgaged yourselves to the capitalists. ಈ ಮಾತನ್ನು ನಾನು ಏಕೆ ಹೇಳಬೇಕೆಂದರೆ ನಿಮ್ಮ ನಡವಳಿಕೆ ಈ ಒಂದು ವರ್ಷದಲ್ಲಿ ಯಾವುದಾದರೂ ಒಂದು ಕಾನೂನು ಅಥವಾ ಕೂಲಿಕಾರರಿಗಾಗಿ ಅಥವಾ ಯಾವುದಾದರೂ ಒಂದು ಕಾರ್ಯಕ್ರಮ ಈ ಬಡವರಿಗಾಗಿ, ಈ ದೀನದಲಿತರಿಗಾಗಿ ಅಥವಾ ಯಾವ ಜನ ನಿಮಗೆ ಬೆಂಬಲ ಕೊಟ್ಟು ಈ ಅಧಿಕಾರದಲ್ಲಿ ಕೂಡಿಸಿದರು ಅಥವಾ ಯಾವ ತತ್ವಜ್ಞಾನದ ಮೇಲೆ ನೀವು ಇವತ್ತಿನ ದಿವಸ ಈ ಕುರ್ಚಿಯನ್ನು ಹಿಡಿದು 45 ವರ್ಷದಿಂದ ಹೋರಾಟ ಮಾಡಿದ್ದೀರಿ ಒಂದು ಕಿಂಚಿತ್ ಆದರೂ ವಾಸನೆ ಅದರಲ್ಲಿ ಇದೆಯೇ?

4.10 ಪಿ. ಎಂ.

ಆದರೆ ನೀವು ನಮಗೆ ಹೇಳುತ್ತೀರಿ ನಾವೇನು ಮಾರ್ವಾಡಿಯವರ ಮಕ್ಕಳೇ ಎಂದು ಸ್ವಾಮಿ, ನೀವು ಮಾರ್ವಾಡಿಯವರ ಮಕ್ಕಳು ಅಲ್ಲ. ನೀವು ರೈತರ ಮಕ್ಕಳೇ ಆದರೆ ಈ ರೈತರ ಮಗ

ಮಾರ್ವಾಡಿಯವರ ಹತ್ತಿರ ಗಿರವಿ ಇಟ್ಟುಕೊಂಡಿದ್ದಾರೆ. ಅದನ್ನು ನಾನು ಹೇಳುತ್ತಾ ಇದ್ದೇನೆ. ಶ್ರೀಮಂತರ ಹತ್ತಿರ ಗಿರವಿ ಇಟ್ಟುಕೊಂಡಿರುವುದನ್ನು ನಾನು ಹೇಳುತ್ತಾ ಇದ್ದೇನೆ. ನಾವು ಅಲ್ಲಿ ಧರಣಿ ಕುಳಿತಿದ್ದೆವು ಎಂದು ಮಾತನಾಡಲಿಲ್ಲ. ಅದರ ಬಗ್ಗೆ ಒಂದು ಚಕಾರ ಶಬ್ಧವನ್ನೂ ಕೂಡ ಎತ್ತಲಿಲ್ಲ. ಆದರೆ ಅವರಿಗೆ ಅವಕಾಶ ಸಿಕ್ಕಿತು ಎಂದು ಹಾಗೆ ಹೇಳಿದರು. ಅವರು ಹೇಳಿದ್ದಕ್ಕೆ ಉತ್ತರ ಕೊಡತಕ್ಕಂಥ ಅವಕಾಶ ನಮಗೆ ಇರಲಿಲ್ಲ. ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದು ಒಬ್ಬಿಬ್ಬರ ಪ್ರಶ್ನೆ ಅಲ್ಲ. ಇದು ಲಕ್ಷಾಂತರ ಜನರ ಪ್ರಶ್ನೆ. ಭಾಗ್ಯಜ್ಯೋತಿ, ಮನೆ ಬೆಳಗತಕ್ಕಂಥವರ ಪ್ರಶ್ನೆ ಇಲ್ಲಿದೆ. ಸುಮಾರು 11 ಲಕ್ಷ 55 ಸಾವಿರ ಪಂಪ್‌ಸೆಟ್‌ಗಳು ಇರತಕ್ಕಂಥ ರೈತರ ಪ್ರಶ್ನೆ. ಸುಮಾರು 2 ಲಕ್ಷಕ್ಕಿಂತಲೂ ಹೆಚ್ಚು ಇರತಕ್ಕಂಥ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ನವರ ಪ್ರಶ್ನೆ. ಹೀಗೆ ಒಂದಲ್ಲ ಎರಡಲ್ಲ, ಅನೇಕ ಜನರಿಗೆ ಇದು ನೇರವಾಗಿ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಅದಕ್ಕಾಗಿ ಆ ನೋಟಿಫಿಕೇಷನ್ ಜೊತೆಯಲ್ಲಿ ಇವರುಗಳ ಸಾವು-ಬದುಕಿನ ಪ್ರಶ್ನೆ ಇದೆ. ಅದಕ್ಕಾಗಿ ಈ ವಿಚಾರದ ಬಗ್ಗೆ ಕೂಲಂಕಷವಾಗಿ ಚರ್ಚೆಯಾಗಬೇಕೆಂದು ನಾವು ಹೇಳುತ್ತಿದ್ದೇವೆಯೇ ಹೊರತಾಗಿ acros the table ನಾವು ಕುಳಿತಲ್ಲೇ ನಾನೊಂದು ಹೇಳುವುದು, ಅವರೊಂದು ಹೇಳುವುದು ಮುಂತಾಗಿ ಆಗುವುದಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಒಂದು ಮಾತನ್ನು ಕೇಳುತ್ತೇನೆ. ಅದರಲ್ಲಿ ಕೆಟಗರಿ ಚೇಂಜ್ ಮಾಡುವುದು ಮುಂತಾಗಿ ಇದ್ದರೂ ಅದರ ಬಗ್ಗೆ ಚರ್ಚೆ ಮಾಡಲು ನಾನು ಹೋಗುವುದಿಲ್ಲ. ಈಗಾಗಲೇ ಅಡ್‌ಜರ್ನ್‌ಮೆಂಟ್ ಮೋಷನ್ ತಮ್ಮ ಮುಂದೆ ಇದೆ. ಅದನ್ನು ತಾವು ರಿಜೆಕ್ಟ್ ಮಾಡಿಲ್ಲ. ಅದಕ್ಕೆ ಕನ್‌ಸೆಂಟ್ ಅನ್ನು ವಿಥ್ ಹೆಲ್ಡ್ ಮಾಡಿ. ಅದಕ್ಕೆ ತಾವು ಮುಕ್ತವಾಗಿ ವಿವರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಇಡೀ ಸದನವೇ ಅದನ್ನು ಚರ್ಚೆ ಮಾಡಲಿ. pros and cons ಹೇಳಲಿ. ಆದರೆ ರೆವಿನ್ಯೂ ಏನು, ಇನ್‌ಕಂ ಎಷ್ಟು? ಎಕ್ಸ್‌ಪೆಂಡೀಚರ್ ಎಷ್ಟು? ಲೀಕೇಜ್ ಏನು? ಯಾರ್ಯಾರಿಗೆ ಅನುಕೂಲವಾಗುತ್ತದೆ? ಯಾರ್ಯಾರಿಗೆ ಅನಾನುಕೂಲವಾಗುತ್ತದೆ? ಎಷ್ಟರ ಮಟ್ಟಿಗೆ ಅವರು ಸಹಾಯ ಮಾಡಬಹುದು ಎಂಬುದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಪ್ರತಿಯೊಬ್ಬ ಸದಸ್ಯರು ಕೊಡುತ್ತಾರೆ. ಅವರವರು ತಮ್ಮ ಅಭಿಪ್ರಾಯಗಳನ್ನು ಕೊಡುತ್ತಾರೆ. ಅದಕ್ಕಾಗಿ, ಸುಮ್ಮನೆ ಫ್ಲೋರ್‌ಲೀಡರ್ಸ್ ನಮ್ಮನ್ನೆಲ್ಲ ಕರೆದು ನಮಗೆ ಅಲ್ಲಿ ಹೇಳಿ, ಇಲ್ಲಿ ಹೇಳಿ ಎಂದು ಹೇಳಿದರೆ ಇದು ಅರ್ಧಗಂಟೆಯಲ್ಲಿ ಮಾಡಲು ಆಗುವುದಿಲ್ಲ. ನಾನು ಬೇಕಾದರೆ ಒಂದೈದು ಮಂತ್ರಿಗಳ ಹೆಸರನ್ನು ಹೇಳುತ್ತೇನೆ. ಅವರು ಕುಳಿತುಕೊಂಡು ಅರ್ಧ ಗಂಟೆಯಲ್ಲಿ ಇತ್ಯರ್ಥ ಮಾಡಿಕೊಂಡು ಬರುತ್ತಾರೆಯೇ? ನೋಡೋಣ. ಅದು ಆಗುವುದಿಲ್ಲ. ವಿವರವಾಗಿ ಆ ರೀತಿಯಲ್ಲಿ ಮಾಡಲು ಆಗುವುದಿಲ್ಲ. ಯಾಕೆಂದರೆ ಇದರಲ್ಲಿ ಸಾವಿರಾರು ಕೋಟಿ ರೂ.ಗಳ ಆದಾಯವು ಬರತಕ್ಕಂಥಾದ್ದು ಇದೆ. ಖರ್ಚು ಆಗತಕ್ಕಂಥಾದ್ದು ಇದೆ. ಆದ್ದರಿಂದ ಇಂತಹ ಸಮಸ್ಯೆ ಇರುವಾಗ ಇದನ್ನು ನೀವು ಬಹಳ ಲಘುವಾಗಿ ತೆಗೆದುಕೊಂಡು ಹೇಗಾದರೂ ಮಾಡಿ ನಾವು ಅವರನ್ನು ಮಣಿಸುತ್ತೇವೆ, ಹೇಗಾದರೂ ಮಾಡಿ ಸೋಲಿಸುತ್ತೇವೆ, ಈ ಧರಣಿಯನ್ನು ವಾಪಸ್ ತೆಗೆದುಕೊಳ್ಳುವ ಹಾಗೆ ಮಾಡುತ್ತೇವೆ ಎಂಬ ಒಂದು ರೀತಿಯ ಶಹಭಾಶ್‌ಗಿರಿಯನ್ನು ಪಡೆದುಕೊಳ್ಳತಕ್ಕಂಥಾದ್ದನ್ನು ನೀವು ಮಾಡಿದರೆ ನಾವು ಮಾತ್ರ ಎಂದಿಗೂ ಅದಕ್ಕೆ ಮಣೆಯುವುದಿಲ್ಲ.

ನಮ್ಮ ಹೋರಾಟ ನಡೆಯುತ್ತಿರುತ್ತದೆ. ಯಾವ ಯಾವ ರೀತಿಯಲ್ಲಿ ನಾವು ಹೋರಾಟ ಮಾಡಬೇಕೋ ಅದನ್ನು ನಾವು ಮಾಡುತ್ತೇವೆ.

(ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ್ ಎಂ. ಮಾಮನಿ) ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಜನರ ಮುಂದೆ ಹೋಗಿ ಅವರಿಗೆ ಇದನ್ನು ಹೇಳುತ್ತೇವೆ. ಯಾರ್‍ಯಾರಿಗೆ ಇದು ನೋವು ಆಗಿದೆ ಎಂಬುದು ಸೆಪ್ಟಂಬರ್‌ನಲ್ಲಿ ಬಿಲ್ ಬಂದಾಗ ಗೊತ್ತಾಗುತ್ತದೆ. ಇನ್ನೂ ಬಹಳ ಜನರಿಗೆ ಗೊತ್ತಾಗಿಲ್ಲ. ಮಾನ್ಯ ಅಧ್ಯಕ್ಷರಿಗೂ ಕೂಡ ಗೊತ್ತಾಗಿಲ್ಲ ಎಂದು ಕಾಣುತ್ತದೆ. ಬಹುಶಃ ತಮ್ಮ ಪಂಪ್‌ಸೆಟ್‌ನ ಬಿಲ್ ಮುಂತಾಗಿ ಬಂದ ಮೇಲೆ ತಮಗೂ ಅದರ ಬಿಸಿ ಗೊತ್ತಾಗುತ್ತದೆ. ತಾವುಗಳು ನನ್ನ ಪಕ್ಕದಲ್ಲಿ ಕುಳಿತಾಗ ಹೇಳಿದ್ದೀರಿ. "ಹೌದು ಇಷ್ಟು ಹೊರೆ ಹಾಕಬಾರದಿತ್ತು" - ಎಂದು ಹೇಳಿದ್ದೀರಿ.

ಉಪಾಧ್ಯಕ್ಷರು : ಹಾಗೇನೂ ಇಲ್ಲ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆದರೂ ಕೂಡ ನಾನು ನಿಮಗೆ ನಿಮ್ಮ ಪಾರ್ಟಿಯಲ್ಲಿ ಏನಾದರೂ ಮಾಡಿ ಎಂದು ಹೇಳಿದೆ. ಅದಕ್ಕೆ ನೀವು ಅದು ನಿಮಗೆ ಮತ್ತು ಅವರಿಗೆ ಬಿಟ್ಟಿದ್ದು ಎಂದು ಹೇಳಿದ್ದೀರಿ. ಮಾನ್ಯ ಅಧ್ಯಕ್ಷರೇ, ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಅಂದರೆ ಇದು ಬಹಳಷ್ಟು ಜನರಿಗೆ ಸಂಬಂಧಪಟ್ಟಿದ್ದುದು. ಆದ್ದರಿಂದ ಇನ್ನೂ ಅಡ್‌ಜರ್ನ್‌ಮೆಂಟ್ ಮೋಷನ್ ರಿಜೆಕ್ಟ್ ಆಗಿಲ್ಲ. ಅದಕ್ಕೆ ವಿವರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಈ ಸದನದಲ್ಲಿರತಕ್ಕಂಥ ಈ ಕಡೆಯ ಮತ್ತು ಆಕಾಡೆಮಿಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳುತ್ತಾರೆ. ಅವರು ತಮ್ಮ ಅಭಿಪ್ರಾಯಗಳನ್ನು ಹೇಳಿದ ಮೇಲೆಯೂ ನಿಮಗೆ ಸಮಾಧಾನ ಇಲ್ಲ ಆಂದರೆ ಮತ್ತೆ ಮುಂದಿನ ಕ್ರಮ ಏನು ತೆಗೆದುಕೊಳ್ಳುತ್ತೀರೋ ಎಂಬುದನ್ನು ನೋಡೋಣ. ಈ ಕಾರಣಕ್ಕಾಗಿಯಾದರೂ ಇವತ್ತು ಚರ್ಚೆಗೆ ಅವಕಾಶ ಮಾಡಿಕೊಡಿ. ನಮಗೆ ಇಲ್ಲಿ ಕಾಲಹರಣ ಮಾಡಬೇಕು, ಬಿಸಿನೆಸ್ ಹಾಳು ಮಾಡಬೇಕು, ಈ ದೇಶದ ಜನರ ಹಣವನ್ನು ಕಾಪಾಡಲು ನೀವೊಬ್ಬರೇ ಕಾಳಜಿಯುಳ್ಳವರು ಎಂದು ತಿಳಿದುಕೊಳ್ಳಬೇಡಿ. ನಮಗೂ ಅಂಥ ಕಾಳಜಿ ಇದೆ ನಮ್ಮ ಧರಣದಿಂದಾಗಿ ಈ ಹಣ ಲುಕ್ಸಾನು ಆಗಿದೆ ಎಂದು ಭಾವಿಸುವುದು ಬೇಡ. ಹೀಗೆ ಕೆಲವು ಮಂತ್ರಿಗಳು ಮತ್ತು ಸದಸ್ಯರು ಹೇಳಿರುವುದು ಸರಿಯಲ್ಲ. ನಮ್ಮ ಪ್ರಜಾಪ್ರಭುತ್ವದಲ್ಲಿ ತಮಗೆ ಇರತಕ್ಕಂಥ ಇತಿಮಿತಿಯಲ್ಲಿ ನಾವು ನಡೆದುಕೊಂಡಿದ್ದೇವೆ. ಅದನ್ನು ಬಿಟ್ಟು ಎಲ್ಲವನ್ನೂ ನಮ್ಮ ಮೇಲೆ ಹಾಕುವುದು ಬೇಡ. ನಿಮ್ಮ ಮೊಂಡುತನದಿಂದ ಈ ಮೂರು ದಿನಗಳು ಹೋಯಿತು. ಸ್ವಲ್ಪವಾದರು ನಾವು ಇಟ್ಟ ಡಿಮ್ಯಾಂಡ್‌ಗೆ ಒಪ್ಪಿಕೊಂಡಿದ್ದರೆ ಈ ಪ್ರಶ್ನೆಯೇ ಬರುತ್ತಾ ಇರಲಿಲ್ಲ. ಆದರೂ ಕೂಡ ಇವತ್ತಿನ ದಿವಸ ನೀವು ಅದಕ್ಕೆ ಒಪ್ಪದೇ ಈ ಮೊಂಡುತನದ ಧೋರಣೆಯನ್ನು ತಾಳಿದ್ದಕ್ಕಾಗಿ ಜನರ ಹಿತದೃಷ್ಟಿಯಲ್ಲಿ ಮತ್ತು ರೈತರ ಹಿತದೃಷ್ಠಿಯಿಂದ, ರಾಜ್ಯದ ಐದುಕೋಟಿ ಜನರ ಹಿತದೃಷ್ಠಿಯಿಂದ ಇವೊತ್ತು ಹಿತ ಅನೇಕ ಡಿಮ್ಯಾಂಡ್ಸ್ ಸದನದ ಮುಂದೆ ಇವೆ. ಅವುಗಳ ಮೇಲೆ ನಾವು ಚರ್ಚೆ ಮಾಡಬೇಕಾಗ ಇದೆ. ಅದಕ್ಕಾಗಿ ನಾವು ಇಲ್ಲಿ ಕಾಲಾಹರಣ ಮಾಡಬಾರದು ಮತ್ತು ಅವರೂ ಕೂಡ

ಇದಕ್ಕೆ ಸಾಕಷ್ಟು ಪ್ರಚೋದನೆ ಕೊಟ್ಟರು. ಇದನ್ನು ಅವರು ಹೀಗೇ ಮುಂದುವರಿಸಿಕೊಂಡು ಹೋಗಲಿ. ನಾವು ಯಾವುದೇ ರೀತಿಯಲ್ಲಿ ಅವರೊಂದಿಗೆ ಮಾತುಕತೆಯನ್ನು ಆಡಬಾರದು. ಯಾವುದೇ ಸಹಾಯವನ್ನು ಅವರಿಗೆ ಮಾಡಬಾರದು ಎನ್ನತಕ್ಕಂಥ ಧೋರಣೆಯನ್ನು ಇಟ್ಟುಕೊಂಡು ಅವರು ಮಾಡಬೇಕೆಂದಿರುವುದು ಏನು ಅಂದರೆ, ಹೀಗೇ ನಮಗೆಲ್ಲಾ ಮುಂದುವರಿಸಿ, ಕೊನೆಗೆ ಡಿಮ್ಯಾಂಡ್‌ಗಳು ಬರುತ್ತಾವಲ್ಲಾ ಅವುಗಳನ್ನು ಗಿಲೆಟಿನ್ ಹಾಕಿಕೊಂಡು ಮನೆಗೆ ಹೋಗೋಣ ಎನ್ನುವ ಪ್ರಯತ್ನದಲ್ಲಿ ಇದ್ದರು. ಅವರು ಅಂದುಕೊಂಡಂತೆ ಅಷ್ಟು ಸುಲಭದಲ್ಲಿ ನಾವು ಬಿಡುವುದಿಲ್ಲ. ನಮಗೂ ಅದರ ವಾಸನೆ ಬಂತು. ಅವರು ಏನೇನು ಮಾಡುತ್ತಾ ಇದ್ದಾರೆ? ಯಾರನ್ನು ಹಿಡಿದಿದ್ದಾರೆ? ಎಲ್ಲೆಲ್ಲಿ ಮಾತುಕತೆಯಾಯಿತು? ಯಾರ‍್ಯಾರ ಕಿವಿಯಲ್ಲಿ ಹೇಳಿದರು? ಹೊರಗಡೆ ಏನು ಹೇಳಿದರು? ಅವರು ಯಾರ‍್ಯಾರ ಕಿವಿಮಾತಿಗೆ ಓಗೊಟ್ಟರು ಎನ್ನುವುದೂ ಕೂಡ ನಮಗೆ ಗೊತ್ತಿದೆ. ಆದ್ದರಿಂದ ಅವರಿಗೆ ನಾವು ಇಷ್ಟು ಸುಲಭವಾಗಿ ಡಿಮ್ಯಾಂಡ್‌ಗಳನ್ನು ಪಾಸ್ ಮಾಡಿಕೊಳ್ಳಲು ಬಿಡುವುದಿಲ್ಲ. ನಮ್ಮ ಮುಂದೆ ಅನೇಕ ವಿಷಯಗಳಿವೆ. ವೀರಪ್ಪನ್ ಸಮಸ್ಯೆ ಇದೆ, ಕಾವೇರಿ ಇದೆ, ಆಲಮಟ್ಟಿ ಇದೆ. ಪಿಡಿಎಸ್‌ದು ಇದೆ, ಲಾ ಅಂಡ್ ಆರ್ಡರ್‌ದು ಇದೆ, ಜರ್ನ್‌ಲಿಸ್ಟ್ ಮರ್ಡರ್ ವಿಚಾರಣೆ ಇದೆ, ಈ ಕೊಲೆಯಲ್ಲಿ ಕೆಲವೊಂದು ಇನ್‌ಫ್ಲೂಯನ್‌ಷಿಯಲ್ ಪರ್‌ಸನ್ಸ್ ಇನ್‌ವಾಲ್ವ್ ಆಗಿದ್ದಾರೆ. ಅದೆಲ್ಲಾವನ್ನೂ ಕೂಡ ನಾವು ಇಲ್ಲಿ ಹೇಳಬೇಕಾಗುತ್ತದೆ. ಇಂಥ ಸಾರ್ವಜನಿಕ ಮಹತ್ವದ ವಿಷಯಗಳನ್ನು ಇಟ್ಟುಕೊಂಡು ನಾವು ದಿನವೂ ಅವರ ಮನಸ್ಸು ಒಲಿಸುವುದರಲ್ಲಿ ಹೆಚ್ಚಿನ ಕಾಲಹರಣ ಮಾಡಬಾರದು ಎಂಬ ದೃಷ್ಟಿಯಿಂದ ನಾವು ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದೇವೆ ಅವರಿಗೆ ಮನಸ್ಸೇ ಇಲ್ಲ ವಾದ ಕಾರಣ ಒಲಿಸಿಕೊಳ್ಳುವ ಪ್ರಶ್ನೆ ಬರುವುದಿಲ್ಲ. ತಾವು ಏನು ಆದೇಶವನ್ನು ಕೊಟ್ಟಿದ್ದೀರಿ, ಮತ್ತು ತಮ್ಮ ಆದೇಶದ ಮೇಲೆ ನಾವು ಇಲ್ಲಿ ಬಂದು ರೆಸ್ಯೂಂ ಮಾಡಿದ್ದೇವೆ. ತಾವೂ ಕೂಡ ಮುಕ್ತವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ ಎಂದು ಹೇಳಿದ್ದೀರಿ. ಇನ್ನೂ ಆ ವಿಷಯ ಸತ್ತಿಲ್ಲ ಅದನ್ನು ಪುನಃ ತೆಗೆದುಕೊಳ್ಳೋಣ ಎಂಬ ಮಾತನ್ನು ಹೇಳಿದ ಮೇಲೆ ನಾವುಗಳು ಎಲ್ಲರೂ ವಿರೋಧ ಪಕ್ಷದ ನಾಯಕರುಗಳು ಮತ್ತು ಪಕ್ಷಗಳ ಸದಸ್ಯ ಮಿತ್ರರುಗಳು ಈ ಒಂದು ನಿರ್ಣಯವನ್ನು ಮಾಡಿದ್ದೇವೆ. ಮುಂದಿನ ಪ್ರೊಸೀಡಿಂಗ್ಸ್‌ನ್ನು ನಡೆಸುವುದಕ್ಕೆ ನಾವು ಅವಕಾಶ ಮಾಡಿಕೊಡುತ್ತೇವೆ. ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ತಾವುಗಳೂ ಕೂಡ ನನಗೆ ಇಷ್ಟು ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ಮತ್ತು ವಿಶೇಷವಾಗಿ ರಾತ್ರಿಯಲ್ಲಿ ನಾವು ಧರಣಿ ಕುಳಿತಿದ್ದಾಗ ನಮ್ಮ ಯೋಗಕ್ಷೇಮವನ್ನು ತಾವು ವಿಚಾರಿಸಿಕೊಂಡಿದ್ದಕ್ಕಾಗಿ, ಮತ್ತು ಅಧ್ಯಕ್ಷರು ಸಾಕಷ್ಟು ಕಾಳಜಿ ವಹಿಸಿ ಇಲ್ಲೆಲ್ಲಾ ಬಂದು ನಮ್ಮ ಯೋಗಕ್ಷೇಮವನ್ನು ಕೇಳಿದ್ದಕ್ಕಾಗಿ ಅವರಿಗೂ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ತಮಗೂ ಕೂಡ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದೊಂದು ಐತಿಹಾಸಿಕವಾದಂಥ ಸತ್ಯಾಗ್ರಹ. ನಿನ್ನೆ ಮಾಡಿದ ಧರಣವು ಐತಿಹಾಸಿಕವಾದುದು. ಹಿಂದೆ ಅವರೂ ಕೂಡ ಮಾಡಿದ್ದರು. ಆದರೆ ಅವರು ಮಾಡಿದ್ದನ್ನು ಮರೆತರು. ನಾವು ಮಾಡಿದ್ದು ಮಾತ್ರ ಅನೆಡೆಮಾಕ್ರೆಟಿಕ್. ನಾವು ಮಾಡಿದ್ದು ಮಾತ್ರ ವೇಸ್ಟ್‌ಫುಲ್ ಎಕ್ಸ್‌ಪೆಂಡೀಚರ್. ಅವರು ಮಾಡಿದ್ದೆಲ್ಲವೂ ಯೂಸ್‌ಫುಲ್. ಇನ್ನು ಹೆಚ್ಚು ಕಾಲಾವಕಾಶವನ್ನು ನಾನು ತೆಗೆದುಕೊಳ್ಳದೆ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ಈ ಒಂದು ಕಗ್ಗಂಟಿಗೆ ಸರಕಾರದ ಮೊಂಡುತನವೇ ಕಾರಣ. ಮಾನ್ಯ ಮುಖ್ಯಮಂತ್ರಿಯವರು ಒಂದು ತರಹ ಕಲ್ಲುಬಂಡೆಯ ರೀತಿಯಲ್ಲಿದ್ದೀರಿ. ಕಣ್ಣು ಇದ್ದರೂ ಕುರುಡರಂತೆ ನಟನೆ ಮಾಡುತ್ತಾ ಇದ್ದೀರಿ, ಕಿವಿ ಇದ್ದರೂ ಕಿವುಡನಂತೆ ನಟನೆ ಮಾಡುತ್ತಾ ಇದ್ದೀರಿ, ಪ್ರಾಜಾತಂತ್ರ ವ್ಯವಸ್ಥೆಯಲ್ಲಿ ಇದ್ದೇವೆ ಎಂಬುದನ್ನು ಮರೆತು ಬಿಟ್ಟಿದ್ದೀರಿ. ಪ್ರತಿಪಕ್ಷಗಳಿಗೂ ಜನರು ಆಯ್ಕೆ ಮಾಡಿ ಕಳುಹಿಸಿದ್ದಾರೆ, ನೀವು ಮಾಡಿದಂಥ ಅನ್ಯಾಯಗಳನ್ನು, ಜನರ ಭಾವನೆಗಳನ್ನು ವ್ಯಕ್ತಪಡಿಸಲು ಇಲ್ಲಿ ಬಂದು ಕುಲುತಿರುವ ಜನಪ್ರತಿನಿಧಿಗಳು ಎಂಬ ಅರಿವನ್ನು ತಾವು ಮರೆತಿರುವುದು ದುರ್ದೈವ ಎಂದು ಹೇಳಬೇಕಾಗುತ್ತದೆ. ತಮಗೆ ಗೊತ್ತಿರುವ ಹಾಗೆ ಇವೊತ್ತು ನಾವು ನಿರೀಕ್ಷೆ ಮಾಡಿದ್ದು ಏನೆಂದರೆ, ಯಾವ ಜಲಾಶಯಗಳು ತುಂಬಿ ತುಳುಕುತ್ತಾ ಇವೆ, ಇಡೀ ದೇಶದಲ್ಲಿಯೇ ಶೇಕಡಾ 75 ರಷ್ಟು ಹೈಡಲ್ ವಿದ್ಯುತ್ ಉತ್ಪಾದನೆಯನ್ನು ಮಾಡತಕ್ಕಂಥ ಒಂದು ಅವಕಾಶ ನಮಗೆ ಇದೆ, ಜಲಾಶಯಗಳು ತುಂಬಿರುವ ಕಾಲದಲ್ಲಿ ಭಗವಂತನ ದಯೆಯಿಂದ ನಮಗೆ ದೊರಕಿದೆ, ಈ ಸಮಯದಲ್ಲಿ 7-8 ತಿಂಗಳ ಹಿಂದೆ ಏನು ವಿದ್ಯುತ್ ದರವನ್ನು ಹೆಚ್ಚು ಮಾಡಿದ್ದರು ಅದನ್ನು ಯಾವುದಾದರೂ ಜವಾಬ್ದಾರಿಯುತ ಸರಕಾರ ಇದ್ದರೆ ಕಡಿಮೆ ಮಾಡಬೇಕಾಗಿತ್ತು. ಅಲ್ಲಿ ಲೂಟಿ ನೆಡಯುತ್ತಾ ಇದೆ. ಥೆಫ್ಟ್ ಎಷ್ಟು ದೊಡ್ಡ ಪ್ರಮಾಣದಲ್ಲಿ ಆಗುತ್ತಾ ಇದೆ ಅದನ್ನು ಸರಿಪಡಿಸಿ ಜನರನ್ನು ನೆಮ್ಮದಿಯಿಂದ ಬದುಕುವಂತೆ ಮಾಡಿ ಎಂದು ಜನರು ನಿಮ್ಮನ್ನು ಆಯ್ಕೆ ಮಾಡಿ ಕಳುಹಿಸಿಕೊಟ್ಟರೆ, ಈ ರೀತಿಯಾಗಿ ಪ್ರತಿಪಕ್ಷಗಳ ಯಾವ ಮಾತಿಗೂ ಸೊಪ್ಪು ಹಾಕದೇನೇ, ಯಾರೋ ನಿಮ್ಮ ಸುತ್ತಮುತ್ತಲಿನವರು ಏನು ಹೇಳುತ್ತಾರೆ, ಅವರಿಂದಲೇ ನಮ್ಮ ಕುರ್ಚಿಯನ್ನು ಉಳಿಸಿಕೊಳ್ಳುತ್ತೇವೆ ಎನ್ನುವ ಭ್ರಮೆಯಲ್ಲಿ ಇವೊತ್ತು ತಾವು ಈ ರೀತಿಯಾಗಿ ನಡೆದುಕೊಳ್ಳುತ್ತಾ ಇದ್ದೀರಿ. ಅಧ್ಯಕ್ಷರೇ, ರಾಜ್ಯದಾದ್ಯಂತ ಮೊನ್ನೆ 11ರಂದು ಸುಮಾರು 154 ತಾಲ್ಲೂಕುಗಳಲ್ಲಿ ಈ ವಿದ್ಯುತ್ ದರವನ್ನು ಜಾಸ್ತಿ ಮಾಡಿದ್ದರ ಬಗ್ಗೆ ನಾವು ಧರಣಿ ಮಾಡಿದೆವು, ಸತ್ಯಾಗ್ರಹ ಮಾಡಿದೆವು. ಕೇಇಬಿಗೆ ಮುತ್ತಿಗೆ ಹಾಕಿದೆವು. ಜನರ ಅಭಿಪ್ರಾಯಗಳನ್ನು ನಿಮಗೆ ತಿಳಿಸೋಣ ಎಂದು ಪ್ರಜಾತಂತ್ರ ವ್ಯವಸ್ಥೆಯ ಕ್ರಮವನ್ನು ಮಾಡಿದೆವು. ನಾವು ಬಸ್ ಸುಡಲಿಲ್ಲ, ಬೆಂಕಿ ಹಚ್ಚಲಿಲ್ಲ. ಅದರಲ್ಲಿ ನಮಗೆ ನಂಬಿಕೆ ಇಲ್ಲ. ಮಹಾತ್ಮಾ ಗಾಂಧೀಜಿಯವರು ಹಾಕಿಕೊಟ್ಟಂಥ ಒಂದು ದಾರಿಯಲ್ಲಿ ನಿಮ್ಮ ಗಮನ ಸೆಳೆಯುವ ಪ್ರಯತ್ನವನ್ನು ಸದನ ಇಲ್ಲದಿದ್ದ ಕಾರಣ ನಾವು ಹೊರಗೆ ಮಾಡಿದೆವು. ಸದನದ ಒಳಗೆ ಬಂದ ಮೇಲೆ ನಾವೇನು ಮಾಡಿದೆವು? ನಿಮಗೆ ಜವಾಬ್ದಾರಿ ಇದ್ದಿದ್ದರೆ ನಾವೆಲ್ಲರೂ ನಿಮ್ಮ ಗಮನಕ್ಕೆ ತಂದಮೇಲೆ ತಾವು ಸೂಕ್ತ ಉತ್ತರವನ್ನು ಕೊಡಬಹುದಾಗಿತ್ತು. ನೀವು ಧರಣಿ ಮಾಡಿ ಬಿಡಿ ನಾನಂತೂ ಕನ್‌ಸೆಷನ್ ಅನೌನ್ಸ್ ಮಾಡುವವನು ಇದ್ದೇನೆಂದು ನೀವು ಹೇಳಿದಿರಲ್ಲಾ ಈ ಜ್ಞಾನೋದಯ ನಿಮಗೆ ಯಾವಾಗ ಆಯಿತು? ನಾವು ಇಲ್ಲಿ ಚರ್ಚೆ ಮಾಡಿದ ಮೇಲೆ ಧರಣಿ ಮಾಡಿದ ಮೇಲೆ ತಾನೇ? ನಿಮ್ಮ ಅಧಿಕಾರಿಗಳು ಕೊಟ್ಟಿದ್ದಕ್ಕೆ ಕಣ್ಣುಮುಚ್ಚಿಕೊಂಡು ಸಹಿ ಮಾಡಿದವರು ನೀವೇ ತಾನೇ? ಯಡಿಯೂರಪ್ಪನವರೇ, ಒಂದು ಪೈಸೆ ಕಡಿಮೆ ಮಾಡುವುದಿಲ್ಲವೆಂದು ಈಗಲೂ ಹೇಳಿ. ಈ ಇಲಾಖೆ ಉಳಿಯಬೇಕೆಂದು ನಾನು ನೂರು ಬಾರಿ ಯೋಚನೆ ಮಾಡಿ ವಿದ್ಯುತ್ ದರ ಜಾಸ್ತಿ ಮಾಡಿದ್ದೇನೆಂದು ಹೇಳಿ. ನಾನು ಈ ಇಲಾಖೆಯನ್ನು ಉಳಿಸುವುದಕ್ಕೋಸ್ಕರ ಇಂತಿಂತಹ ಕಾರ್ಯಕ್ರಮವನ್ನು

ತೆಗೆದುಕೊಂಡಿದ್ದೇನೆ. ಥೆಫ್ಟ್ ಇಷ್ಟು ಕಡಿಮೆ ಮಾಡಿದ್ದೇನೆ ಇಷ್ಟು ಕೋಟಿ ಉಳಿಸಿದ್ದೇನೆ. ಇನ್‌ವೆಂಟರಿ ನಾನು ನೋಡಿದ್ದೇನೆಂದು ತಿಳಿಸಿ. ತಮಗೆ ಇದನ್ನು ನೋಡುವುದಕ್ಕೆ ಬಿಡುವು ಇದೆಯೇ? ನೋಡಿದ್ದೀರಾ? ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡಿದೆವು ಚರ್ಚೆ ಮಾಡಿದೆವು. ತಾವು ಬಂದು ನಾವು ಕೇಳಿದಂತಹ ಪ್ರಶ್ನೆಗಳಿಗೆ ಉತ್ತರ ಕೊಟ್ಟಿರಾ ? ಅನೇಕ ರೀತಿಯ ಸಲಹೆಗಳನ್ನು ನಾವು ಕೊಟ್ಟೆವು. ಅದಕ್ಕೆ ಉತ್ತರ ಕೊಡುವ ಧೈರ್ಯ ತಾವು ಮಾಡಿದಿರಾ? ಆ ಕಡೆ ಗಮನ ಕೊಟ್ಟಿರಾ? ನಾವು ಬಂದು ಅಧ್ಯಕ್ಷರನ್ನು ಕೇಳಿಕೊಂಡೆವು ತಾವು ಇರಲಿಲ್ಲ. 15 ನಿಮಿಷ ಸದನ ಮುಂದೂಡಿ ಮಾನ್ಯ ಮುಖ್ಯ ಮಂತ್ರಿಯವರನ್ನು ಕರೆಯಿರಿ. ಸಭಾನಾಯಕರೇ ತಾವು ಒಪ್ಪಿಕೊಳ್ಳಿ ನಾವು ಮಾತುಕತೆ ನಡೆಸುವುದಕ್ಕೆ ಸಿಧ್ಧರಿದ್ದೇವೆಂದು ತಿಳಿಸಿದೆವು ಆದರೆ ಅದಕ್ಕೆ ಮಾತಿಲ್ಲ. ಒಂದು ಪೈಸೆ ಇಳಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಕಳೆದ 26-27 ವರ್ಷಗಳಲ್ಲಿ ಹಗಲೂ ರಾತ್ರಿ ಧರಣಿ ಕುಳಿತಿರುವುದೇ ಇಲ್ಲ ಎಂದು ಮಾನ್ಯ ನಂಜೇಗೌಡರು ಹೇಳುತ್ತಿದ್ದಾರೆ ಅದನ್ನು ನಾನು ಕೇಳಿದ್ದೇನೆ. ಆವತ್ತಿನ ಮುಖ್ಯಮಂತ್ರಿಗೆ ಘೇರಾವು ಮಾಡಿದ್ದನ್ನು ನಾನು ಕೇಳಿದ್ದೇನೆ. ನಾನು ಶಾಸಕನಾಗಿ 14-15 ವರ್ಷವಾಯಿತು ಎಂದೂ ಸಹ ರಾತ್ರಿ ಇಡೀ ಪ್ರತಿ ಪಕ್ಷದ ಮುಖಂಡರು ನಮ್ಮ ಎಲ್ಲಾ ಭಿನ್ನಾಭಿಪ್ರಾಯ ಮರೆತು ರಾಜ್ಯದ ಹಿತದೃಷ್ಟಿಯಿಂದ ಧರಣಿ ಮಾಡಿದಂತಹ ಒಂದು ಐತಿಹಾಸಿಕ ಉದಾಹರಣೆ ಇಲ್ಲ. ಇದೊಂದು ಐತಿಹಾಸಿಕ ಹೋರಾಟ. ಶಾಂತ ರೀತಿಯಲ್ಲಿ ನಿಮ್ಮ ಗಮನ ಸೆಳೆಯುವಂತಹ ಹೋರಾಟ. ಸೌಜನ್ಯಕ್ಕೆ ರಾತ್ರಿ ತಾವು ನಮ್ಮನ್ನು ಭೇಟಿ ಮಾಡಲು ಬಿಡುವು ಮಾಡಿಕೊಂಡು ಬಂದಿರಾ? ನಿಮ್ಮ ಸರಕಾರದ ನಡವಳಿಕೆಯನ್ನು 5 ಕೋಟಿ ಜನ ನೋಡುತ್ತಿದ್ದಾರೆ. ನಾವೇನೂ ಇಲ್ಲಿಗೆ ಹಾಗೇ ಓಡಿ ಬಂದಿಲ್ಲ. ಏನೋ ಹತ್ತು ಜನ ಜಾಸ್ತಿ ನೀವು ಬಂದು ಅಧಿಕಾರ ನಡೆಸುತ್ತಿರಬಹುದು. 95-96 ಜನ ಹೆಜ್ಜೆ ಹೆಜ್ಜೆಗೆ ನೀವು ಮಾಡುತ್ತಿರುವಂತಹ ಜನ ವಿರೋಧಿ ನೀತಿಯನ್ನು ಅನೇಕ ಹಗರಣಗಳನ್ನು ಬಯಲು ಮಾಡುವುದಕ್ಕೆ ಸಿದ್ಧವಿದ್ದೇವೆ. ನಿಮ್ಮ ಸ್ಟ್ರಾಟಜಿ ಏನು? ನಿನ್ನೆ ಎನು ಹೇಳಿದಿರಿ, ಅಧಿವೇಶನ ಕರೆಯಿರಿ ಎಂದು ಕೂಗುತ್ತೀರಿ ಅಧಿವೇಶನ ಕರೆದ ತಕ್ಷಣ ಧರಣಿ ಮಾಡುತ್ತೀರಿ ಎಂದು ಹೇಳುವಂತಹ ಮೊಂಡು ಸರಕಾರಕ್ಕೆ ನಾವು ಏನು ಹೇಳುವುದು. ನಿಮ್ಮಂತಹ ಮೊಂಡು ಸರಕಾರಕ್ಕೆ ಜನರು ಕಣ್ಣೀರು ಹಾಕುತ್ತಿರಬೇಕಾದರೆ ನಾವು ನಿಲುವಳಿ ಸೂಚನೆಯಮೂಲಕ ಪ್ರಸ್ತಾಪ ಮಾಡುತ್ತೇವೆ ಧರಣಿ ಮಾಡುತ್ತೇವೆ ಇಲ್ಲಿ ಒಳಗೆ ಹೊರಗೆ ಹೋರಾಟ ಮಾಡಬೇಕಾಗುತ್ತದೆ. ಪ್ರಾಜಾತಂತ್ರ ವ್ಯವಸ್ಥೆಯಲ್ಲಿ ಈ ಮಾರ್ಗ ಬಿಟ್ಟು ಬೇರೆ ಮಾರ್ಗ ಏನಿದೆ? ವಿಧಾನ ಸೌಧದ ಮೂರನೇ ಮಹಡಿಯಿಂದ ನೆಲಕ್ಕೆ ಹಾರಿಕೊಳ್ಳಬೇಕಾಗಿತ್ತೇ? ಆಗ ನಿಮಗೆ ಮನವರಿಕೆಯಾಗುತ್ತಿತ್ತೇ? ಇದು ನನಗೆ ಅರ್ಥವಾಗುತ್ತಿಲ್ಲ. ನೀವು ಒಂದು ಸಂದರ್ಭದಲ್ಲಾದರೂ ಕರೆದು ಮಾತನಾಡುವ ಸೌಜನ್ಯ ತೋರಿದ್ದೀರಾ? ನಾವು ಈಗ ತೀರ್ಮಾನ ಮಾಡಿದ್ದೇವೆ. ನಮ್ಮ ಡ್ಯೂಟಿಯನ್ನು ನಾವು ಮಾಡುದ್ದೇವೆ. ಜನರಿಗೆ ಒಂದು ರೀತಿಯಲ್ಲಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಿಶ್ವಾಸವಿಲ್ಲದಿರುವಂತಹ ಚುನಾಯಿತ ವಿರೋಧ ಪಕ್ಷದ ಪಕ್ಷಗಳ ಶಾಸಕರ ಬಗ್ಗೆ ಗೌರವ ಇಲ್ಲದಿರುವಂತಹ ಈ ಮೊಂಡ ಸರಕಾರದ ನಡವಳಿಕೆಯನ್ನು ಪ್ರಾಮಾಣಿಕವಾಗಿ ತಿಳಿಸುವಂತಹ ಕರ್ತವ್ಯವನ್ನು ನಾವು ಮಾಡಿದ್ದೇವೆ. ಇದರಲ್ಲಿ ಏನೂ ಸ್ವಾರ್ಥವಿಲ್ಲ. ನೀರು ಇಲ್ಲದೇ ಇದ್ದಾಗ ನೂರು

ರೂಪಾಯಿ ಒಂದು ಹೆಚ್.ಪಿ.ಗೆ ಜಾಸ್ತಿ ಮಾಡಿ ಬೆಳೆ ಹಾಳು ಮಾಡಿಕೊಂಡವರಿಗೆ 300 ರೂಪಾಯಿ ಮಾಡುವುದಕ್ಕೆ ಹೊರಟಿದ್ದೀರಲ್ಲಾ ಅವರು ಶ್ರೀಮಂತರೇ? ಯಾರೋ ಎರಡು ಹೊತ್ತು ಊಟ ಮಾಡಿಕೊಂಡಿದ್ದವನಿಗೆ ಅವನು ಕೇಳಿರಲಿಲ್ಲ ಆತನಿಗೆ ಒಂದು ಬಲ್ಬು ಬೆಳಕು ಕೊಡುತ್ತೇವೆಂದು ಹೇಳಿ ಅವನಿಗೆ ಮೂರೂವರೆ ರೂಪಾಯಿ ಮಾಡಿದ್ದೀರಲ್ಲಾ ಅವನು ಶೀಮಂತನೇ? ಎರಡು ಹೊತ್ತು ಗಂಜಿ ಇಲ್ಲದೆ ನಿಮಗೆ ನೌಕರಿ ಕೊಡುವ ಶಕ್ತಿ ಇಲ್ಲದೆ, ಯಾವುದೋ ಕಾರ್ಖಾನೆಯಲ್ಲಿ ಕೆಲಸ ಮಾಡಿಕೊಂಡು 500-1000 ರೂಪಾಯಿ ಸಂಬಳ ತೆಗೆದುಕೊಂಡು ಎರಡು ಹೊತ್ತು ಜೀವನ ಮಾಡುತ್ತಾನೆ ಅವನ ಹೊಟ್ಟೆಯ ಮೇಲೆ ಬಡಿದಿದ್ದೀರಲ್ಲಾ ಅವನು ಶ್ರೀಮಂತನೇ? ನೀವು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೋ ಹೇಳಲಿ ಅದು ದಾಖಲೆಗೆ ಹೋಗಲಿ ಈವತ್ತು ಮಾತನಾಡುವುದು ಬೇಡವೆಂದು ನಿರ್ಧರಿಸಿದ್ದೆವು. ಯಾವ ಮನೆಯಲ್ಲಿ ಸಾಮಾನ್ಯ ಗ್ರಾಹಕರು 100 ಯೂನಿಟ್‌ವರೆಗೆ ವಿದ್ಯುತ್ ಉಪಯೋಗಿಸುತ್ತಾರೆ ಅದನ್ನೂ ಸಹ ಕನ್‌ವರ್ಟ್ ಮಾಡಿ ಎ.ಇ. ಹೆಚ್. ಮಾಡುವುದಕ್ಕೆ ಹೊರಟಿದ್ದೀರಿ. ಒಂದು ಫ್ಯಾನ್ ಇದ್ದರೆ ನೂರು ಯೂನಿಟ್‌ಗಿಂತ ಜಾಸ್ತಿ ಇದ್ದರೆ ಅವನು ಮನೆಯಿಂದ ಹೊರಗೆ ಬರುವಂತಹ ಕೆಲಸ ಮಾಡುವುದಕ್ಕೆ ಹೊರಟಿದ್ದೀರಿ ಇದನ್ನು ನಾನು ಹೇಳಬಾರದು. ನಾನು ತಮಗೆ ಹೇಳುತ್ತೇನೆ. ತಮ್ಮದೇ ಆದಂತಹ ಗೊಂದಲದಲ್ಲಿ ಈ ಹೆಚ್ಚುವರಿ ದರ ಏನು ಹಾಕಿದ್ದಾರೆ ಅದನ್ನು ತಾವು ನೋಡಿಲ್ಲ. ನಮಗೆ ಆಶ್ಚರ್ಯ. ನೀವು ಇಲ್ಲಿಯವರೆಗೆ ಏನು ಹೇಳಿಕೊಂಡು ಬಂದಿರಿ. ನಿನ್ನೆ ನೀವೇ ಅಲ್ಲಿ ಕುಳಿತು ಚರ್ಚೆ ಮಾಡುತ್ತಿರುವ ಸಮಯದಲ್ಲಿ 1-7-97 ರಿಂದ 31-3-98 ರವರೆಗೆ ಅಡಿಷನಲ್ ರೆವಿನ್ಯೂ ಕೆ ಇ ಬಿಯಲ್ಲಿ ನಿರೀಕ್ಷೆ ಮಾಡುತ್ತಿರುವುದು 338 ಕೋಟಿ ರೂ.ಗಳು ಎಂದು ಅಂದರೆ ಒಂದು ವರ್ಷಕ್ಕೆ 452 ಕೋಟಿ ರೂ ಆಯಿತು. ನಿಮ್ಮ ಕೆ ಇ ಬಿ ಯವರಿಗೆ ಕೇಳಿದ್ದೀರಾ ಕಳೆದ 7 ತಿಂಗಳ ಹಿಂದೆ ಎರಡು ಮನೆಯ ಸಮಿತಿ ಮಾಡಿ 700 ಕೋಟಿ ಹೆಚ್ಚು ಕೊಟ್ಟೆವಲ್ಲಾ ಅದು ಎಲ್ಲಿ ಹೋಯಿತು ಏನು ಮಾಡುತ್ತಿದ್ದೀರಿ? ಅಕೌಂಟೆಬಿಲಿಟಿ ಇದೆಯೇ? ಹೇಳುವವರು ಕೇಳುವವರು ಇದ್ದಾರೆಯೇ? ಮನ ಬಂದಂತೆ ಮಾಡಿ, ಈ ನಾಡಿನ 55 ಸಾವಿರ ಹಳ್ಳಿಗಳ ಪ್ರತಿಯೊಬ್ಬ ವ್ಯಕ್ತಿ ಕುಸಿದು ಹೋಗುತ್ತಿದ್ದಾನೆ ಆಕ್ರೋಶಗೊಂಡಿದ್ದಾನೆ. ಜನರು 500 ರೂಪಾಯಿ ಒಂದು ಹೆಚ್.ಪಿ.ಗೆ ಕೊಡುವುದಕ್ಕೆ ರೆಡಿ ಇದ್ದಾರೆಂದು ತಾವು ಹೇಳುತ್ತಿದ್ದೀರಿ. ಕೆಇಬಿ ಯನ್ನು ಉದ್ದಾರ ಮಾಡಬೇಕೆಂದರೆ ಹಂತ ಹಂತವಾಗಿ ಜಾಸ್ತಿಮಾಡಿ. ಮೊನ್ನೆ ತಾನೆ ಜಾಸ್ತಿ ಮಾಡಿದ್ದೀರಿ. ಅವನಿಗೆ ಒಳ್ಳೆಯ ವಿದ್ಯುತ್ ಕೊಡಿ ಅವನು ಚೆನ್ನಾಗಿ ಒಳ್ಳೆಯ ರೀತಿಯಲ್ಲಿ ಬದುಕುತಿದ್ದಾನೆಯೇ? ಸುಧಾರಣೆಯಾಗಿದ್ದಾನೆಯೇ? ಎಂಬುದನ್ನು ಯೋಜನೆ ಮಾಡದೆ ಅಧಿಕಾರಿಗಳು ತಂದು ಕೊಟ್ಟರು ನೀವು ಕಣ್ಣು ಮುಚ್ಚಿಕೊಂಡು ಸಹಿ ಮಾಡಿದಿರಿ. ನೀವು ಕಣ್ಣು ಮುಚ್ಚಿ ಸಹಿ ಮಾಡಿದ್ದನ್ನು ಒಪ್ಪಿಕೊಳ್ಳುವುದಕ್ಕೆ ನಾವು ಇಲ್ಲಿ ವಿರೋಧ ಪಕ್ಷದಲ್ಲಿ 95-96 ಜನ ಶಾಸಕರು ಬಂದಿದ್ದೇವೆಯೇ? ರಾಜ್ಯದ ಜನರಿಗೆ ಎಷ್ಟೊಂದು ನಂಬಿಸಿದಿರಿ. ಹಿಂದೆ ಮಾಡಿದವರನ್ನು ನೋಡಿ ನೋಡಿ ಬೇಸತ್ತು ನೀವೇನೋ ಒಳ್ಳೆಯ ಕೆಲಸ ಮಾಡುತ್ತೀರಿ ಎಂದು ನಂಬಿ ಜನರು ಓಟು ಕೊಟ್ಟರೆ ಅವರು ಬೀದಿಗೆ ಬರುವ ಹಾಗೆ ಮಾಡಿಬಿಟ್ಟರಲ್ಲಾ. ನಮ್ಮ ಪರವಾಗಿ ಮತನೀಡತಕ್ಕ ಅನೇಕ ಶಾಸಕರು ಆ ಕಡೆ ಸಿಗುತ್ತಾರೆ. ನಾವು ನಿಮ್ಮ ಮೇಲೆ ಅವರನ್ನೂ ಎತ್ತಿಕಟ್ಟಿ ಕೆಣಕುವುದಕ್ಕೆ

ಇಷ್ಟಪಡುವುದಿಲ್ಲ. ಇದು ಎಂತಹ ಪ್ರಜಾತಂತ್ರ ವ್ಯವಸ್ಥೆ ಎಂಬುದು ಅರ್ಥವಾಗುವುದಿಲ್ಲ. ನಿಮ್ಮ ಶಾಸಕಾಂಗ ಪಕ್ಷದಲ್ಲಿ ಇದು ಸರಿ ಹೋಗುವುದಿಲ್ಲವೆಂದು ಹೇಳಿದ್ದನ್ನು ನೀವೇ ಮನವರಿಕೆ ಮಾಡಿಕೊಂಡು ನೀವೇ ಹೌಸ್‌ನಲ್ಲಿ ಇಂತಿಂಥಾದ್ದನ್ನು ಮಾಡಿದ್ದೇವೆಂದು ಇಲ್ಲಿ ಹೇಳಬಹುದಿತ್ತು. ಎರಡು ಮನೆಯ ಸಮಿತಿ ಮಾಡಿ ಎಂದು ನಾವು ಕೇಳಿದ್ದೆವು. ನಾವು ಪರಿಶೀಲಿಸುತ್ತೇವೆ ಅಲ್ಲಿಯವರಿಗೆ ಸ್ಟೇ ಮಾಡಿ ಎಂದು ನಾವು ಕೇಳಿದ್ದೆವು. ನೀವು ಇಲ್ಲ 5-6 ಜನ ಆ ಕಡೆ ಈ ಕಡೆ ಬಂದು ನಮ್ಮ ಜೊತೆ ಮಾತನಾಡಿ ಏನು ಆಗಬೇಕೋ ಮಾಡಿ ಎಂದು ಹೇಳಿದಿರಿ. ಅದಕ್ಕೆ ಏನಾದರೂ ದಾಖಲೆ ಇರುತ್ತದೆಯೇ ಅದು ಅಕೌಂಟಿಗೆ ಸಿಗುತ್ತದೆಯೇ? ಅದಕ್ಕೇನಾದರೂ ಜವಾಬ್ದಾರಿ ಇರುತ್ತದೆಯೇ? ಹೌಸ್ ಸಮಿತಿಗೆ ಒಂದು ಪ್ರಾತಿನಿಧ್ಯತೆ ಇಲ್ಲವೇ? ಪಾವಿತ್ರ್ಯತೆ ಇಲ್ಲವೇ? ಇದನ್ನು ಕೇಳಿದರೆ ಇದಕ್ಕೆ ಒಪ್ಪದೆ ಮೊಂಡು ವಾದ ಮಾಡಿದಿರಿ. ನನಗೆ ಗೊತ್ತಿಲ್ಲ ಅನೇಕ ಹಿರಿಯ ಜನ ಸದಸ್ಯರು ಅಲ್ಲಿ ಇದ್ದೀರಿ. ನೀವು ನಿಮ್ಮ ಮುಖ್ಯಮಂತ್ರಿಗೆ ವಿರೋಧ ಪಕ್ಷದವರು ಒಳ್ಳೆಯ ಸಲಹೆ ಕೊಡುತ್ತಿದ್ದಾರೆ ಜನರು ಬದುಕುವುದಕ್ಕೆ ಒಳ್ಳೆಯ ಸಲಹೆಕೊಡುತ್ತಿದ್ದಾರೆ, ನಮ್ಮ ಕಾಲ ಮುಗಿಯುತ್ತಾ ಬರುತ್ತಿದೆ. ನಮ್ಮ ತಲೆಯ ಮೇಲೆ ನಾವೇ ಕಲ್ಲು ಚಪ್ಪಡಿ ಎಳೆದುಕೊಳ್ಳುತ್ತಿದ್ದೇವೆ, ಅವರು ಒಳ್ಳೆಯ ಸಲಹೆ ಕೊಡುತ್ತಿದ್ದಾರೆ ಕೇಳಿ ಎಂದು ಅವರ ಕಿವಿಯಲ್ಲಿ ಹೇಳಬಹುದಿತ್ತು. ಆದರೆ ಅದರ ಬದಲು ಒಪ್ಪಿಕೊಳ್ಳಬೇಡಿ : ನಮ್ಮ ಪ್ರೆಸ್ಟೀಜ್ ಎಂದು ಅವರ ಕಿವಿಯಲ್ಲಿ ಹೇಳುತ್ತಾರೆ. ಯಾವುದು ಅದು ಪ್ರೆಸ್ಟೀಜ್ ನಮ್ಮ ಮಾಲೀಕರು ಯಾರು? ಆ ಮಾಲೀಕರು ನಮಗೆ ಓಟು ಕೊಡದಿದ್ದರೆ ನೀವು ಅಲ್ಲಿ ಇರುತ್ತಿದ್ದಿರಾ, ನಾನು ಇಲ್ಲಿ ಇರುತ್ತಿದ್ದೇವೆಯೇ? ನಾನು ಮಾತನಾಡುವ ಒಂದೊಂದು ಮಾತುಗಳೂ ಸಹ ನಮ್ಮ ಜನರ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತವೆ ಅಂಥ ಜನರ ಪ್ರತಿನಿಧಿಗಳಾದ ನಾವು ಇಲ್ಲಿ ಕೈ ಎತ್ತುವುದಕ್ಕೆ ಕಲೆತಿದ್ದೇನೆ ಹೇಗೋ ಕಾಲ ಹರಣ ಮಾಡಿಕೊಂಡು ಇದ್ದಷ್ಟು ದಿವಸ ಮಂತ್ರಿಯಾಗಿ ಆನಂದವಾಗಿ ಇರೋಣ ವಿದೇಶ ಪ್ರವಾಸ ಮಾಡಿಕೊಂಡು ಕುಳಿತಿರುವ ಧಾರುಣ ಸ್ಥಿತಿ ಇದೆ. ಈ ದೇಶದ ಇತಿಹಾಸದಲ್ಲಿ ಕೇಳಿದ್ದೀರಾ "ವೀರಪ್ಪನ್ ಷರತ್ತಿಗೆ ಒಪ್ಪಿಗೆ ವಿಶೇಷ ನ್ಯಾಯಾಲಯ ರಾಷ್ಟ್ರಪತಿ ಕ್ಷಮಾಪಣೆ ವಿಶೇಷ ಜೈಲು ಕ್ಷಿಪ್ರ ವಿಚಾರಣೆ" ಎಂದು ಪತ್ರಿಕೆಯಲ್ಲಿ ಬಂದಿದೆ. ಯಾರನ್ನು ಕೇಳಿ ಮಾಡುತ್ತೀರಿ? ಹೇಳುವವರು ಕೇಳುವವರು ಯಾರೂ ಇಲ್ಲ. ಬಾರಾಕೂನ್ ಮಾಫ್. ಈ ರೀತಿಯ ಆಡಳಿತ ಎಷ್ಟರ ಮಟ್ಟಿಗೆ ನಿಮಗೆ ಶೋಭೆ ತರುತ್ತದೆಂಬುದನ್ನು ವಿಚಾರ ಮಾಡಿ. ಜೆ. ಹೆಚ್. ಪಟೇಲರಂತಹ ಒಬ್ಬ ಸಮಾಜವಾದಿ ಹಿನ್ನೆಲೆಯಲ್ಲಿ ಬಂದಂತಹ ವ್ಯಕ್ತಿಗೆ ಬಡವರ ಬಗ್ಗೆ ಕಳಕಳಿ ಇರಬಹುದು ಯೋಚನೆ ಮಾಡಬಹುದು ಕುರ್ಚಿಯಲ್ಲಿ 4 ದಿನ ಇದ್ದರೆಷ್ಟು ಹೋದರೆಷ್ಟು ಕುರ್ಚಿಯ ಬಗ್ಗೆ ಯೋಚನೆ ಮಾಡುವ ಜನ ಅಲ್ಲವೆಂದು ನಾನು ತಿಳಿದಿದ್ದೆ. ಆದರೆ ಕುರ್ಚಿಗಾಗಿ ಅದಕ್ಕೆ ಅಂಟಿಕೊಳ್ಳುವುದಕ್ಕೆ ಜನರನ್ನು ಸರ್ವನಾಶ ಮಾಡುವುದಕ್ಕೆ ಸಿದ್ಧರಿದ್ದೀರಿ ಎಂಬ ತೀರ್ಮಾನಕ್ಕೆ ಅನಿವಾರ್ಯವಾಗಿ ಈ ಕಡೆ ಕುಳಿತಿರುವ ನಾಡಿನ ಜನ ಅನಿವಾರ್ಯವಾಗಿ ತೀರ್ಮಾನಕ್ಕೆ ಬರುವಂತಹ ದುಸ್ಥಿತಿಗೆ ನೀವು ಬಂದಿದ್ದೀರಿ. ವಿನಾಶಕಾಲೇ ವಿಪರೀತ ಬುದ್ಧಿ ಎಂದು ನೀವು ಮಾಡುವುದಾದರೆ ಎರಡು ಸದನಗಳ ಸಮಿತಿ ಮಾಡುವುದು ಅಗತ್ಯವಿಲ್ಲ. ವಿದ್ಯುತ್ ದರ ಕಡಿಮೆ ಮಾಡಿ ಎಂದರೆ ಕೇಳುವುದಿಲ್ಲ ಎಂದರೆ ಜನತಾ ನ್ಯಾಯಾಲಯಕ್ಕೆ ಹೋಗುತ್ತೇವೆ. ನಿಮ್ಮನ್ನು

ಆಯ್ಕೆಮಾಡಿ ಕಳುಹಿಸಿದ ಜನರಿಗೆ ನೀವು ದ್ರೋಹಮಾಡಿ ಚುನಾಯಿತ ಪ್ರತಿನಿಧಿಗಳಾಗಿ ನಿಮ್ಮ ಸರಕಾರದಲ್ಲಿ ಅಧಿಕಾರ ನಡೆಸಲಿಕ್ಕೆ ಸಾಧ್ಯವಿಲ್ಲದಿರುವ ಜನ ಅಧಿಕಾರದಲ್ಲಿ ಕುಳಿತಿದ್ದೀರಿ. ಇನ್ನಾದರೂ ಬುದ್ಧಿ ಕಲಿತುಕೊಳ್ಳಿ ಎಂದು ಜನರ ಮುಂದೆ ಹೋಗುತ್ತೇವೆ. ಇನ್ನೂ ಅನೇಕ ವಿಚಾರಗಳು ಇವೆ. ನಿಮ್ಮದೇನು ಸಂಚು ಇದೆ ಎಂದರೆ ಏನಾದರೂ ಮಾಡಿ ಇನ್ನು ಅನೇಕ ವಿಚಾರಗಳು ಇವೆ. ನಿಮ್ಮದೇನು ಸಂಚು ಇದೆ ಎಂದರೆ ಏನಾದರೂ ಮಾಡಿ ಇನ್ನು 4-5 ದಿವಸ ಹೋಗಲಿ ಅಷ್ಟು ಪ್ರಸ್ತಾಪಗಳು ಕಡಿಮೆಯಾಗಲಿ ನಾವು ನೆಮ್ಮದಿಯಿಂದ ನಿದ್ದೆ ಮಾಡಬಹುದು ಆರಾಮವಾಗಿರಬಹುದು ಎನ್ನುವಂತಹ ನಿಮ್ಮ ಕುತಂತ್ರದ ರಾಜಕಾರಣ ಏನು ಇದೆ, ಇದಕ್ಕೆ ನಾವು ಬಿಜೆಪಿ ಯವರು ಬಲಿಯಾಗುವುದಿಲ್ಲ. ಅದಕ್ಕೇ ನಾವು ಬಿಜೆಪಿ ಶಾಸಕರು ಸಭೆ ಕರೆದಿದ್ದೇವೆ. ನಾನು ಮಾನ್ಯ ಅಧ್ಯಕ್ಷರಿಗೆ ಹೇಳಿಕಳುಹಿಸಿದೆ. ನಂಜೇಗೌಡರಿಗೆ ಹೇಳಿದೆ. ಇನ್ನು ಒಂದು ನಿಮಿಷ ಯಾವುದೇ ಕಾರಣಕ್ಕೆ ಸದನದ ಕಾರ್ಯಕಲಾಪ ತಡೆಯುವುದಕ್ಕೆ ಸಿದ್ಧವಿಲ್ಲ. ಇನ್ನು ಅನೇಕ ವಿಚಾರಗಳನ್ನು ಗಮನಕ್ಕೆ ತರಬೇಕಾಗಿದೆ ಇನ್ನು 17-18 ದಿವಸಗಳು ಇವೆ ನೂರಾರು ವಿಚಾರಗಳು ಇವೆ ಅನೇಕ ವರ್ಗದ ಜನರು ಕಣ್ಣೀರು ಹಾಕುತ್ತಿದ್ದಾರೆ. ಪ್ರಾರಂಭಿಕವಾಗಿ ಇದು ಬಹಳ ಮುಖ್ಯವಾದದ್ದು. ಚರ್ಚೆಯಾದರೆ ನಿಮ್ಮ ಮನ ಒಲಿಸಿದರೆ ನೀವು ಯೋಚನೆ ಮಾಡುತ್ತೀರಿ ಎಂದು ನಾವು ಭಾವಿಸಿದ್ದೆವು. ಏಕೆ ಈ ರೀತಿ ಕಲ್ಲು ಬಂಡೆಯಂತೆ ಆಗಿದ್ದೀರೋ ನನಗಂತೂ ಅರ್ಥವಾಗಿಲ್ಲ. ನಾವು ಈಗಾಗಲೇ ನಿಲುವಳಿ ಸೂಚನೆ ಕಳುಹಿಸಿದ್ದೇವೆ. ದಯಮಾಡಿ ವಿವರವಾದ ಚರ್ಚೆಗೆ ಅವಕಾಶ ಮಾಡಿಕೊಡಿ. ಜನರಿಗೆ ಗೊತ್ತಾಗಲಿ. ಒಂದು ಪೈಸೆ ಕನ್‌ಸೆಷನ್ ನಾವಂತೂ ಕೇಳುವುದಿಲ್ಲ. ನಮಗೆ ಅಗತ್ಯ ಇಲ್ಲ. ನೀವು ಕೊಟ್ಟರೂ ನಮಗೆ ಸಂಬಂಧವಿಲ್ಲ. ನೀವು ಕುಳಿತುಕೊಳ್ಳಿ ಬಿಡಲಿ ನೀವು ಧರಣ ಮಾಡಿ ಬಿಡಿ ನನಗೆ ಮನವರಿಕೆಯಾಗಿದೆ ಕೆಲವು ಕನ್‌ಸೆಷನ್ ಕೊಡುತ್ತೇನೆಂದು ಹೇಳಿದರೆ ಅರ್ಥವೇನು? ಧರಣಿ ಮಾಡದಿದ್ದರೆ ನಿಲುವಳಿ ಸೂಚನೆ ತರದಿದ್ದರೆ ಎಲ್ಲೆಲ್ಲಿ ಎಡವಿದ್ದೀರಿ ಎಂದು ನಿಮಗೆ ಮನವರಿಕೆ ಯಾಗುತ್ತದೆಯೇನು? ಅದನ್ನು ಅಕ್ಸೆಪ್ಟ್ ಮಾಡಿಕೊಳ್ಳುತ್ತಿದ್ದೀರಿ ಎಂದೇ ನೀವು ನಿಮ್ಮ ಕೆಇಬಿ ಅಧಿಕಾರಿಗಳು ಕೊಟ್ಟದ್ದನ್ನು ಕಣ್ಣು ಮುಚ್ಚಿಕೊಂಡು ಸಹಿ ಮಾಡಿದ್ದೀರಿ ಎಂದು ಹೇಳುವುದಕ್ಕೆ ಇದಕ್ಕಿಂತ ಪ್ರೂಫ್ ಬೇಕೇನು? ಹೆಚ್ಚು ಮಾತನಾಡುವ ಅಗತ್ಯವಿಲ್ಲ. ನಮ್ಮ ಕರ್ತವ್ಯವನ್ನು ನಮ್ಮ ಪಕ್ಷದ ಸದಸ್ಯರು ನಾವೆಲ್ಲಾ ಇಲ್ಲಿ ಸೇರಿ ಮಾಡಿದ್ದೇವೆ. ದಯಮಾಡಿ ನಿಲುವಳಿ ಸೂಚನೆಯ ಮೂಲಕ ವ್ಯಾಪಕವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಿ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಈ ಸರ್ಕಾರ ಯಾವರೀತಿ ಪ್ರತಿಯೊಂದು ವರ್ಗದ ಜನರಿಗೆ ಪ್ರತಿಯೊಬ್ಬ ವ್ಯಕ್ತಿಗೆ ವಿದ್ಯುತ್ ದರವನ್ನು ಹೆಚ್ಚಿಗೆ ಮಾಡುವ ಮೂಲಕ ರಾಜ್ಯದ ಜನತೆಗೆ ಈ ವೇದಿಕೆಯ ಮೂಲಕ ಎಂದು ತಿಳಿಸುವಂತಹ ಕರ್ತವ್ಯವನ್ನು ನಾವು ನಿರ್ವಹಿಸಲು ತಾವು ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ. ನಿಶ್ಚಿತವಾಗಿ ನಿಮಗೆ ಮನವರಿಕೆಯಾಗಿದೆ. ವಿವರವಾದ ಚರ್ಚೆಯನ್ನು ಮಾಡುವುದಕ್ಕೆ ನಮಗೆ ಅವಕಾಶ ಮಾಡಿಕೊಡುತ್ತೀರೆಂದು ನಂಬಿಕೊಂಡು ಇವತ್ತು ಈ ಸಮಯದಲ್ಲಿ ನಿಮ್ಮಲ್ಲಿ ನಾನು ಹೇಳಿಕಳುಹಿಸಿದ್ದೆ. ನಾನು ವಿನಂತಿ ಮಾಡಿ ಕೇಳುತ್ತೇನೆ. ಮುಖ್ಯ ಮಂತ್ರಿಗಳು ಏನು

ಮಾಡಿದರು, ರಾಜ್ಯದ ಜನರಿಗೆ ಏನು ಕೊಡಿಸಿದಿರೆಂದು ಹೇಳಬಹುದು. ಆದರೆ 26-27 ವರ್ಷಗಳ ನಂತರ ಈ ರೀತಿ ಸರಿಸಮಾನವಾಗಿರತಕ್ಕಂಥ 95 ಜನ ಶಾಸಕರು ಮೇಲ್ಮನೆಯಲ್ಲಿ ಹಾಗೂ ಕೆಳ ಮನೆಯಲ್ಲಿ ಧರಣ ಕುಳಿತುಕೊಳ್ಳುವಂತಹ ದುಸ್ಥಿತಿಗೆ ನೀವು ತಂದಿದ್ದೀರಿ. ಜನ ಪ್ರತಿನಿಧಿಗಳ ಸರ್ಕಾರ, ಜನತಾ ಸರ್ಕಾರ, ಮಣ್ಣಿನ ಸರ್ಕಾರ,ನಾವು ಜನಹಿತಕ್ಕೋಸ್ಕರ ಬದುಕುವವರು, ನಾವು ಬಂದರೆ ನಿಮಗೆ ಟೋಪಿ ಹಾಕುತ್ತೇವೆ ಎಂದು ಹೇಳಿ ರಾಜ್ಯದ ಜನರ ತಲೆಯನ್ನು ನುಣ್ಣಗೆ ಬೋಳಿಸಿ ಈ ದುಸ್ಥಿತಿಗೆ ತರುವಂತಹ ಪರಿಸ್ಥಿತಿ ನೀವು ಇವತ್ತು ತಂದಿದ್ದೀರಿ. ಜನ ನಿಮಗೆ ಬುದ್ಧಿ ಕಲಿಸುತ್ತಾರೆ, ಜನರ ಮುಂದೆ ಹೋಗುತ್ತೇವೆ, ನೀವು ಜನರಿಗೆ ಮಾಡಿರುವಂತಹ ದ್ರೋಹವನ್ನು ಬಯಲು ಮಾಡುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ. ಯಡಿಯೂರಪ್ಪನವರು ಹೊರಗಡೆ ಹೋಗುತ್ತಾರೆಂದು ಈಗಾಗಲೇ ಯೋಚನೆ ಮಾಡುತ್ತಿದ್ದೀರಿ. ಯಾವ ಕಾರಣಕ್ಕೂ ಭಾರತೀಯ ಜನತಾ ಪಾರ್ಟಿಯವರು ನಮ್ಮ ಶಾಸಕರು ಎಂತಹ ಸಂದರ್ಭ ಬಂದರೂ ಧರಣಿ ಮಾಡುವುದಿಲ್ಲ ಈ ಅಧಿವೇಶನ ಮುಗಿಯುವವರೆಗೆ. ನಮಗೆ ಅನೇಕ ಅಸ್ತ್ರಗಳು ಇವೆ. ಧರಣಿ ಮಾಡುವುದಿಲ್ಲ, ಧರಣಿ ಮಾಡಿದ್ದು ತಪ್ಪಾಗಲಿಲ್ಲ, ನಿಮ್ಮ ಉತ್ತರ ಕೊಡಬೇಕಾದರೆ ಹೇಳಿ, ನಾವು ನಿಶ್ಚಯ ಮಾಡಿದ್ದೇವೆ, ನಮ್ಮ ಪಕ್ಷದ ಶಾಸಕಾಂಗ ಸಭೆಯನ್ನು ಮಾಡಿದ್ದೇವೆ.

ಶ್ರೀ ಹೆಚ್. ಎನ್. ನಂಜೇಗೌಡ : ಕಿನ್ನರಿ ಯಾರ ಮುಂದೆ ಬಾರಿಸಬೇಕು? ಕೋಣನ ಮುಂದೆ ಕಿಂದರಿ ಏನು ಅನುಕೂಲವಾಗುತ್ತದೆ?

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ಅಧಿಕಾರ ಇದ್ದಾಗ ಹೊಗಳು ಭಟ್ಟರು ಜಾಸ್ತಿಯಾಗುತ್ತಾರೆ ಈ ಮಾತನ್ನು ಹೇಳುತ್ತೇನೆ ಮುಖ್ಯಮಂತ್ರಿಗಳೇ ಆ ಫೈಲ್‌ನ್ನು ಆಮೇಲೆ ನೋಡಿ ಸರ್. ಇದನ್ನು ಮಾಡಬೇಡಿ ಇದು ಪ್ರೆಸ್ಟೀಜ್, ಯಾವುದು ಪ್ರೆಸ್ಟೀಜ್, ನಾವು ಜನರ ಪ್ರೆಸ್ಟೀಜನ್ನು ಉಳಿಸುವುದಕ್ಕೆ ಬಂದಿರುವವರು. ಅವರು ಇಲ್ಲದಿದ್ದರೆ ನಮಗೆ ಏನು ಇದೆ. ಅವರು ಓಟು ಕೊಡದಿದ್ದರೆ ನೀವು ಮುಖ್ಯಮಂತ್ರಿಗಳು ಆಗುತ್ತಾ ಇದ್ದಿರಾ? ನನ್ನಂಥ ಒಬ್ಬ ಸಾಮಾನ್ಯ ರೈತನ ಮಗನು ಇವತ್ತು ಶಾಸಕ ಆಗುತ್ತಾ ಇದ್ದನಾ? ಅವರ ಆಶೀರ್ವಾದದಿಂದ ನಾವು ಬಂದವರು. ಜನ ಹಿತವನ್ನು ಸಂಪೂರ್ಣವಾಗಿ ಮರೆತು ತೆರಿಗೆಯನ್ನು ಹಾಕಿಕೊಂಡು ದೊಡ್ಡ ದೊಡ್ಡವರಿಗೆ ಸಹಕಾರ ಕೊಟ್ಟುಕೊಂಡು ಗ್ರಾನೈಟ್ ದೊರೆಗಳಿಗೆ, ಹೆಂಡದ ದೊರೆಗಳಿಗೆ, ನೆಲಗಳ್ಳರಿಗೆ ನೀವು ಬೆಂಬಲ ಕೊಡುತ್ತಿರುವುದರಿಂದ ಇವತ್ತು ನಮ್ಮ ಬಡವರು ಸಾಯುತ್ತಿದ್ದಾರೆ. ಅವರು ದುಡಿಯುತ್ತಿದ್ದಾರೆ ಅವರಿಗೆ ಬೇಕಾದಂಥ ನೆರವು, ಅವನಿಗೆ ಬೇಕಾದಂಥ ಸವಲತ್ತುಗಳನ್ನು ಒದಗಿಸಿ ಕೊಡಬೇಕಾದರೆ ಸರ್ಕಾರದ ಒಂದು ರಾಕ್ಷಸ ಕೃತ್ಯ ಇವತ್ತು ನಡೆಯುತ್ತಿದೆಯಲ್ಲಾ, ಜನಹಿತವನ್ನು ಸಂಪೂರ್ಣ ಮರೆತಿದ್ದೀರಲ್ಲಾ, ಅವನಿಗೆ ದ್ರೋಹವನ್ನು ಮಾಡುತ್ತಿದ್ದೀರಲ್ಲಾ. ದೇವರು ನಿಮ್ಮನ್ನು ಕ್ಷಮಿಸುತ್ತಾನೆಯೇ? ನೀವು ಒಬ್ಬರೇ ಕುಳಿತಾಗ ಯೋಚನೆ ಮಾಡಿ, ಯೋಚಿಸಿ ಈಗಲಾದರೂ ಭಗವಂತ ನಿಮಗೆ ಸದ್‌ಭುದ್ಧಿ ಕೊಟ್ಟು ಈ ನೋಟಿಫಿಕೇಷನ್‌ನ್ನು ಸಂಪೂರ್ಣ ವಾಪಸ್ಸು ತೆಗೆದುಕೊಂಡು ಮೊದಲು ಜಾಸ್ತಿ ಮಾಡಿರುವುದನ್ನು ಕಡಿಮೆ ಮಾಡಿ ಆ ಜನ ಬದುಕುವಂತಹ

ವ್ಯವಸ್ಥೆ ಮಾಡಿ. ನಾನು ಹೇಳುತ್ತೇನೆ ಈ ಸದನದಲ್ಲಿ ಕುಳಿತು ಚಾಲೆಂಜ್ ಮಾಡುತ್ತೇನೆ, 40 ಜನ ಶಾಸಕರ ಪಕ್ಷದವನಾಗಿ ಹೇಳುತ್ತೇನೆ.

ಶ್ರೀ ಹೆಚ್. ಎನ್. ನಂಜೇಗೌಡ : ಅವರು ಈಗ ಅಯ್ಯಪ್ಪ ಸ್ವಾಮಿಗೆ ಹೋಗಿ ಬಂದಿದ್ದಾರೆ, ಈಗ ಅವರು ಆತ್ಮಾವಲೋಕನ ಮಾಡಿಕೊಳ್ಳುತ್ತಾರೆ.

(ಅಧ್ಯಕ್ಷರು ಶ್ರೀ ರಮೇಶ್‌ಕುಮಾರ್) ರವರು ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ವಿಷಯವನ್ನು ಹೆಚ್ಚು ನಾನು ಬೆಳೆಸುವುದಿಲ್ಲ. ನಾನು ಸ್ವಲ್ಪ ಪರಿಶೀಲಿಸುತ್ತಿದ್ದೆ, ಆತ್ಮಾವಲೋಕನ ಮಾಡಿಕೊಳ್ಳುತ್ತಿದ್ದೆ. ಯಡಿಯೂರಪ್ಪ ಹೆಚ್ಚು ಕಡಿಮೆ ಮಾತನಾಡಿ ಅದಕ್ಕೂ ಕಲ್ಲು ಹಾಕಿದರು ಎಂದು ಅನ್ನಿಸಿಕೊಳ್ಳುವುದಕ್ಕೆ ನಾನು ಇಷ್ಟಪಡುವುದಿಲ್ಲ, ನೀವು ಹೇಳಿದ ಮೇಲೆ ಕಾದು ನೋಡೋಣ. ಈ ನಿಲುವಳಿ ಸೂಚನೆಯನ್ನು ಇನ್ ಡಿಟೇಲ್ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ನಾನು ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮ ವಾದ ಏನು ಇದೆ ಅವರು ಅಲ್ಲಿಗೆ ಹೋಗಿ ಕೆಟ್ಟಿದ್ದಾರೆಂದು ಹೇಳಿದರೆ, ನೀವು ಅಲ್ಲಿಗೆ ಹೋಗಿ ಚೆನ್ನಾಗಿ ಆಗಿದ್ದಾರೆಂದು ಹೇಳುತ್ತಿದ್ದೀರಿ. ನಮ್ಮ ವಾದ ಏನೆಂದರೆ, ಈ ಸಮಾಜವಾದಿ ಮುಖಂಡರು ಮತ್ತು ರ್‍ಯಾಷನಲಿಸ್ಟ್ ಅಲ್ಲಿಗೆ ಹೋಗಿ ಕೆಟ್ಟರಲ್ಲಾ ಎಂಬ ವ್ಯಥೆ ಇದ್ದರೆ, ನೀವು ಸುಖ ಪಡುತ್ತಿದ್ದೀರಲ್ಲಾ, ಇದು ಹೇಗೆ ಇದೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) : ನೀವು ಏನು ಹೇಳಿದಿರಿ ಈಗಲೋ ಆಗಲೋ ಬೀಳುತ್ತೀರಿ ಎಂದು, ಯಡಿಯೂರಪ್ಪನವರು ಕಲ್ಲು ಬಂಡೆ ಹಾಗೆ ಇದ್ದೀರೆಂದು ಹೇಳಿದರು. ಇಂತಹ ಆಪೋಸಿಷನ್ ಇದ್ದಾಗ ದೇವರೇ ಕಾಪಾಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ : ಕಲ್ಲು ಬಂಡೆಯನ್ನು ಮೇಲಿನಿಂದ ಉರುಳಿಸಲು ಬಹಳ ಜನ ಬೇಕಾಗಿಲ್ಲ. ಸುಮ್ಮನೆ ತಳ್ಳಿದರೆ ಉರುಳಿಕೊಂಡು ಹೋಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಪ್ರೀಸಿಯೇಷನ್ ಮಾಡಿರುವುದರಲ್ಲಿ ವ್ಯತ್ಯಾಸ ಇದೆ ಅಲ್ಲಾ, ನೀವು ಅಲ್ಲಿಗೆ ಹೋಗಿದ್ದೇ ತಪ್ಪು ಎನ್ನತಕ್ಕಂಥವನು ನಾನು, ಹೋಗಿದ್ದೇ ಸರಿ ಎನ್ನತಕ್ಕಂಥವರು ಅವರು, ಅಂದಮೇಲೆ ಇದರಲ್ಲಿ ವ್ಯತ್ಯಾಸ ಇರುವುದೇ.

ಮಾನ್ಯ ಸದಸ್ಯರು : ಮಳೆಗಾಳಿ ಏನು ಗೊತ್ತಾಗುವುದಿಲ್ಲ ಅದು ಬೋರ್ಕಲ್ಲು.

ಅಧ್ಯಕ್ಷರು : ಅವರದು Unity in diversity.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೆ ಒಂದು ಮೋಡ ಕವಿದ ವಾತಾವರಣ ಇಲ್ಲಿ ಇತ್ತು, ಹೊರಗಡೆಯೂ ಹಾಗೆಯೇ ಇದೆ. ತಾವು

ಅದನ್ನು ಪರಿಹಾರ ಮಾಡುವುದರಲ್ಲಿ ಯಶಸ್ವಿಯಾಗಿದ್ದೀರಿ. ನಾನು ಅದಕ್ಕಾಗಿ ಅಭಿನಂದಿಸುತ್ತೇನೆ. ಈ ಒಂದು ಪರಿಸ್ಥಿತಿ ತಲುಪುವುದಕ್ಕೆ ಸರ್ಕಾರವೇ ಕಾರಣ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲ್‌ರವರು ಅವರು ಬಹಳ ಧಾರಾಳವಾಗಿದ್ದರು. ನಾನು 30 ವರ್ಷಗಳ ಕಾಲ ಅವರನ್ನು ನೋಡಿದ್ದೇನೆ ಅವರ ಜೊತೆ ಓಡಾಡಿದ್ದೇನೆ. 1964-67ರಲ್ಲಿ ಓಡಾಡಿದ್ದೇನೆ. ಯಾಕೋ ಈ ಎರಡು ಮೂರು ತಿಂಗಳಿಂದ ಆಗಿರತಕ್ಕ ಕಠಿಣ ಪರಿಸ್ಥಿತಿಗೆ ಅವರ ಪಾರ್ಟಿ ವ್ಯವಸ್ಥೆ ಏನಾದರೂ ಏರು ಪೇರು ಆಗುತ್ತಿದ್ದೆಯೋ ಹೇಗೆ? ಅಥವಾ ದಳದಲ್ಲಿ ಏನಾದರೂ ಗಂಪುಗಳು ಆಗಿ ನೀವು ಯಾವಾಗಲೂ ಯಾವುದೇ ವಿಚಾರಕ್ಕೆ ವಿರೋಧ ಪಕ್ಷದವರು ನ್ಯಾಯವಾಗಿ, ಪ್ರಾಮಾಣಿಕವಾಗಿ ಬೇಡಿಕೆ ಇಟ್ಟರೂ ಸಹ ನೀವು ಆ ಬೇಡಿಕೆಗೆ ಒಪ್ಪಬಾರದು ಎನ್ನತಕ್ಕ ಬೇಡಿಕೆ ತಮ್ಮ ಮೇಲೆ ಬಂದಿದೆಯೇ. ನಾನು ಕಾಲಕಾಲಕ್ಕೆ ತಮ್ಮನ್ನು ನೋಡಿದ್ದೇನೆ. ತಾವು ಮುಖ್ಯ ಮಂತ್ರಿಗಳು ಆದಾಗ, ಮತ್ತು ಇವತ್ತಿನ ಪರಿಸ್ಥಿತಿಯನ್ನು ನೋಡಿದಾಗ ಈಗ ಮೂರು ತಿಂಗಳಿಂದ ನಾನು ಎಚ್ಚರಿಕೆಯಿಂದ ನೋಡುತ್ತಿದ್ದೇನೆ. ತಾವು ಕಠಿಣವಾದ ನಿಲುವಿಗೆ, ಪರಿಸ್ಥಿತಿಗೆ ಬರುತ್ತಿದ್ದೀರೆಂಬ ಮನೋಭಾವನೆ ನನಗೆ ಆಗುತ್ತಿದೆ. ಶ್ರೀಮಾನ್ ಯಡಿಯೂರಪ್ಪನವರು ದೇವರಿಗೆ ಹೋಗಿ ಬಂದಮೇಲೆ ಬದಲಾವಣೆ ಆಗಿದ್ದಾರೆಎಂದು ಹೇಳಿದರು ನಿಜ. ಯಾರೇ ಮುಖ್ಯಮಂತ್ರಿಗಳು ಆದರೂ ದೇವಸ್ಥಾನಕ್ಕೆ ಕರೆದುಕೊಂಡು ಹೋಗುವ ಒಂದು ವ್ಯವಸ್ಥೆ ಇದೆ. ನಾಸ್ತಿಕರಾದರೂ ದೇವರು ದಿಂಡರು ಬೇಡ ಎಂದು ಹೇಳಿದರೂ ಅವರನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗುವಂಥದ್ದು, ಕುಂಕುಮ ಹಚ್ಚತಕ್ಕಂಥದ್ದು, ವಿಭೂತಿ ಧರಿಸುವಂಥದ್ದು, ಹಾರ ಹಾಕ ತಕ್ಕಂಥದ್ದು, ಅದು ಒಂದು ವರ್ಗ. ಎಲ್ಲಾ ಸರ್ಕಾರಗಳು ಎಲ್ಲಾ ಮುಖ್ಯಮಂತ್ರಿಗಳು ಬಂದಾಗಲೂ ಈ ವ್ಯವಸ್ಥೆ ಇದೆ. ತಾವು ಅದನ್ನು ವಿರೋಧ ಮಾಡುತ್ತೀರಾ ಎನ್ನುವುದಕ್ಕಿಂತ ಹೆಚ್ಚಾಗಿ ಏಕೆ ವಿರೋಧ ಮಾಡುವುದು ಎಂದು ಎಲ್ಲದಕ್ಕೂ ಹೊರಟಿದ್ದೀರಿ. ಈಗ ನೀವು ದೇವರನ್ನು ಹಿಡಿದುಕೊಂಡು ಭದ್ರವಾಗಿ ಕುಳಿತಿದ್ದೀರಿ. ನಾವು ಅವರ ಬಗ್ಗೆ ಚಿಂತನೆ ಮಾಡುವದಿಲ್ಲ. ತಾವು ದೇವರಿಗೆ ನಿಷ್ಟರಾಗಿ ಇದ್ದೀರಿ, ಇರಬೇಕು. ಅದರ ಬಗ್ಗೆ ನನಗೆ ತಕರಾರು ಇಲ್ಲ. ಆದರೆ ಆ ದೇವರಾದರೂ ನೀವು ತಂದಿರುವ ಈ ಪರಿಸ್ಥಿತಿಯನ್ನು ಮೆಚ್ಚುತ್ತಾನೆಯೇ? ನಾವು ಎರಡು ದಿನದಿಂದ ಧರಣ ಮಾಡುತ್ತಿದ್ದರೆ, ಈ ರಾಜ್ಯದ ಜನತೆಗೆ ವಿದ್ಯುಚ್ಛಕ್ತಿಯ ಬಗ್ಗೆ ಆಗತಕ್ಕಂಥ, ಎಲ್ಲಾ ವರ್ಗದ ಜನರ ಮೇಲೆ ಬೀರತಕ್ಕಂಥ ಪರಿಣಾಮದ ಬಗ್ಗೆ, ಈ ಸದನದಲ್ಲಿ ಸುಮಾರು 30-36 ಗಂಟೆಗಳ ಕಾಲ ನಿರಂತರವಾಗಿ ಧರಣಿ ಮಾಡಿದರೂ, ತಮ್ಮ ಹೃದಯ ಕರಗಿ ಮನಸ್ಸು ಬದಲಾವಣೆಯಾಗಿ ನಮ್ಮ ಈ ಕನಿಷ್ಟ ಬೇಡಿಕೆಯನ್ನು ಈಡೇರಿಸತಕ್ಕಂಥ ಪರಿಣಾಮಕಾರಿಯಾದ ಒಂದು ಮನಸ್ಸು ತಮ್ಮ ಮೇಲೆ ಬೀರಲಿಲ್ಲವೇ? ಯಾವ ದೇವರ ಕೃಪೆಯೂ ತಮ್ಮ ಮೇಲೆ ಬಿರಲಿಲ್ಲವೇ? ಯಾವ ದೇವರೂ ತಮಗೆ ಆಶೀರ್ವಾದ ಮಾಡಲಿಲ್ಲವೇ ಎನ್ನುವಷ್ಟು ನೋವು ನನಗೆ ಆಗುತ್ತದೆ. ನನಗೆ ಅನಿಸುತ್ತದೆ, ನಾವು ಅನೇಕ ಭಾರಿ ನಿಮ್ಮನ್ನು ನೆನೆದುಕೊಳ್ಳುತ್ತೇವೆ. ಈ ಸದನದಲ್ಲಿ ತಾವು ಯಾವ ಮಾತನ್ನು ಹೇಳಬಾರದೋ ಅಂತಹ ಮಾತನ್ನು ಹೇಳಿದ್ದೀರಿ. ಅಂದರೆ, ನಿಮ್ಮ ಸಮಾಜವಾದದ ಸಿದ್ಧಾಂತಕ್ಕೆ ವಿರುದ್ಧವಾಗಿ ಅನೇಕ ಮಾತುಗಳನ್ನು ಹೇಳಿದ್ದೀರಿ. ತಾವು ಚಕ್ರವರ್ತಿಗಳನ್ನು ವಿರೋಧ ಮಾಡಿದವರು, ರಾಜ ಮಹಾರಾಜರುಗಳನ್ನು ವಿರೋಧ ಮಾಡಿದವರು. ಮೈಸೂರು

ರಾಜರಿಗೆ ಕಪ್ಪು ಬಾವುಟ ಹಿಡಿದ ಜನ. ಈಗ ಎಲ್ಲಾವನ್ನು ಒಪ್ಪಿಕೊಳ್ಳುತ್ತಿದ್ದೀರಿ, ಚಕ್ರವರ್ತಿ ಎಂದು ಹೇಳುತ್ತೀರಿ, ನಮ್ಮ ರಾಜರು ಎಂದು ಹೇಳುತ್ತೀರಿ, ನಮ್ಮ ರಾಜ್ಯ ಎಂದು ಹೇಳುತ್ತೀರಿ. ಇವೆಲ್ಲವೂ ಪರಿಸ್ಥಿತಿ ನಿಮ್ಮನ್ನು ಆ ಒಂದು ರೀತಿಗೆ ತಂದಿದೆ ಎಂದು ನಾನು ಅಂದುಕೊಂಡಿದ್ದೇನೆ.

4.40 ಪಿ.ಎಂ.

ಆದರೂ ಇವತ್ತಿನ ಪರಿಸ್ಥಿತಿಯಲ್ಲಿ ನನಗನಿಸಿತು, ಎರಡು ದಿವಸದಲ್ಲಿ ನಿಮ್ಮನ್ನು ಅನೇಕ ಬಾರಿ ನಾನು ಭೇಟಿ ಮಾಡಿ ಈ ಒಂದು ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಹೇಳಿ ಬಹಳ ಪ್ರಾಮಾಣಿಕ ಪ್ರಯತ್ನವನ್ನು ತಮ್ಮ ಮುಂದೆ ಮಾಡಿದೆ. ನಮ್ಮ ಬೇಡಿಕೆ ಅತ್ಯಂತ ಕನಿಷ್ಠವಾದ ಬೇಡಿಕೆ ನಾವೇನು ನಿಮ್ಮ ಸರ್ಕಾರದ ವಿರುದ್ಧ ದೊಡ್ಡ ಆಂಧೋಳನ ಮಾಡಿ ನಿಮ್ಮ ಸರ್ಕಾರವನ್ನು ಕಿತ್ತು ಹಾಕಬೇಕು ಎನ್ನುವ ಬೇಡಿಕೆಯನ್ನಿಟ್ಟಿಲ್ಲ ಈ ಸದನ ಸಮಿತಿಯನ್ನು ಮಾಡಬೇಕು ಎನ್ನುವ ಬೇಡಿಕೆ ಏನಿದೆ, ಇದರಿಂದ ಸರ್ಕಾರಕ್ಕೆ ಅಗೌರವ ಬರುವುದಾಗಲಿ ಯಾವುದೇ ಪ್ರಶ್ನೆಯಿಲ್ಲ ಆದರೆ ತಾವು ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಳ್ಳುವುದಕ್ಕೆ ಕಾರಣವೇನು ಎನ್ನುವುದು ಒಂದು. ಮೊನ್ನೆ ತಾವು ಇದೇ ಸದನದಲ್ಲಿ ಆ ಥಾಟಿಯಲ್ಲಿ ಮಾತನಾಡುವಾಗ ಇಲ್ಲಪ್ಪ ನನ್ನದೇನೂ ಇಲ್ಲ, ನಮ್ಮ ಸ್ನೇಹಿತರು ಹೇಳಿದರು, ಅದರ ಪ್ರಕಾರ ನಾನು ಒಪ್ಪಿ ಕೊಂಡಿದ್ದೇನೆ ಎಂದು ಹೇಳಿದಿರಿ. ನಮ್ಮ ಸ್ನೇಹಿತರು ಹೇಳುವ ಪ್ರಕಾರ ಎನ್ನುತ್ತೀರಿ. ಮಾತೆತ್ತಿದರೆ ನನ್ನದು ಎನ್ನುವ ನಿರ್ಧಾರಕ್ಕೆ ತಾವು ಬರಲಿಲ್ಲ. ಅಂದರೆ ನಿಮ್ಮ ಮೇಲೆ ಯಾವುದಕ್ಕೂ ಹೋಗಬಾರದು ಎನ್ನುವ ಒತ್ತಡ ಬಹಳ ನಿರಂತರವಾಗಿ ನಡೆಯಿತು ಎಂದು ನನಗನಿಸುತ್ತದೆ. ಆದ್ದರಿಂದ ತಾವು ಒತ್ತಡದ ಪರಿಸ್ಥಿತಿಗೆ ಮಣಿದು ಈ ಒಂದು ನಿರ್ಧಾರಕ್ಕೆ ಬಂದಿದ್ದೀರಿ ಎಂದು ನನಗನಿಸುತ್ತದೆ. ಆದರೂ ನೀವೇನೇ ನಿರ್ಧಾರಕ್ಕೆ ಬಂದಿದ್ದರೂ ಒಂದು ದೃಷ್ಟಿಯಲ್ಲಿ ತಮಗೆ ನಾನು ಹೇಳುತ್ತೇನೆ. ಈ ವಿದ್ಯುಚ್ಛಕ್ತಿ ಮಂಡಳಿ ಸರ್ಕಾರದ ಅಳಿವು ಮತ್ತು ಉಳಿವಿನ ಒಂದು ನಿರ್ಧಾರವನ್ನು ಮಾಡತಕ್ಕಂಥ ಒಂದು ಪ್ರಮುಖವಾದ ಒಂದು ಅಂಗ. ಸರ್ಕಾರದಲ್ಲಿ ಈ ವಿದ್ಯುಚ್ಛಕ್ತಿ ಮಂಡಳಿ ಜನಸಾಮಾನ್ಯರು ರೈತ ವರ್ಗ ಕಾರ್ಮಿಕರು, ಕಾರ್ಖಾನೆಯವರು ಪ್ರತಿಯೊಬ್ಬರ ಮೇಲೂ ಇದರ ಪರಿಣಾಮ ಬೀರತಕ್ಕಂಥದ್ದು. ಈ ರೀತಿ ಒಂದು ವರ್ಷದಲ್ಲಿ ಹತ್ತು ತಿಂಗಳಲ್ಲಿ ಎರಡು ಬಾರಿ ದರವನ್ನು ಏರಿಸುವ ನಿರ್ಧಾರಕ್ಕೆ ತಾವು ಬರಬೇಕೆನ್ನುವುದಾದರೆ ಅಂದರೆ ನಿಮಗೆ ಜನರ ಮೇಲೆ, ಮತದಾರರ ಮೇಲೆ ಆ ಜನರ ಮೇಲೆ ಏನು ಪರಿಣಾಮವಾಗಬಹುದು, ನಾಳೆ ಮುಂದೆ ನಮ್ಮ ಸರ್ಕಾರ ಚುನಾವಣೆಗೆ ಹೋದರೆ ನಮ್ಮ ಸರ್ಕಾರದ ಪರಿಸ್ಥಿತಿಯೇನು ಇದು ಯಾವುದನ್ನೂ ಯೋಚನೆ ಮಾಡದೆ ತಾವು ಈ ಗಟ್ಟಿಯಾದ ನಿರ್ಧಾರಕ್ಕೆ ಬರುವ ಕಾರಣವಾದರೂ ಏನು? ಕೆಇಬಿ ವಿದ್ಯುಚ್ಛಕ್ತಿ ಮಂಡಳಿ ದಿವಾಳಿಯಾಗಬೇಕು, ನಷ್ಟವಾಗಬೇಕು, ವಿದ್ಯುಚ್ಛಕ್ತಿ ಮಂಡಳಿ ಖಾಸಗಿಯವರ ಕೈಗೆ ಹೋಗಬೇಕು ಎನ್ನುವ ಉದ್ದೇಶ ನಮ್ಮದೇನೂ ಅಲ್ಲ. ವಿದ್ಯುಚ್ಛಕ್ತಿ ಮಂಡಳಿ ಬೆಳೆಯ ಬೇಕು. ಇವತ್ತು ತಮಗೆ ನಾನು ಹೇಳುತ್ತೇನೆ, ಆ ವಿದ್ಯುಚ್ಛಕ್ತಿ ಮಂಡಳಿ ಬೆಳೆಯಬೇಕೆನ್ನುವಾಗ ಅದಕ್ಕೆ ಅನೇಕ ವಿಧಾನಗಳಿವೆ. ಆ ವಿಧಾನಗಳನ್ನು ತಾವು ಅನುಸರಿಸಬೇಕು. ಈಗ ಇರುವ ಅಧ್ಯಕ್ಷರ ಬಗ್ಗೆ ತಕರಾರೇನೂ ಇಲ್ಲ. ಈಗ ಇರುವ ಅಧ್ಯಕ್ಷರ ಮೇಲೆ ನನಗೆ ವೈಯಕ್ತಿಕವಾದ ದ್ವೇಷ ಇಲ್ಲ.

ಆದರೆ ಅವರ ವರ್ತನೆ ದೃಷ್ಟಿಯನ್ನು ನಾವು ನೋಡಿದಾಗ ಬಹುಶಃ ಅವರನ್ನು ಬದಲಾವಣೆ ಮಾಡಿ. ಹಿಂದೆ ಒಬ್ಬರು ಅಧ್ಯಕ್ಷರು ಇದ್ದರು. ಬಹಳ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿರುವ ವ್ಯಕ್ತಿ. ಅವರ ಬಗ್ಗೆ ನಾಲ್ಕು ಮಾತನ್ನು ನಾನು ಇಲ್ಲಿ ಹೇಳಿದರೆ ನಿಜವಾಗಿಯೂ ಸಂತೋಷ ಎಂದು ನಾನು ಅಂದು ಕೊಂಡಿದ್ದೇನೆ. ನನ್ನ ಕ್ಷೇತ್ರದ ಬಗ್ಗೆ ಒಂದು ವರ್ಷದಲ್ಲಿ ಸಭೆ ಸೇರಿದರು. ನಾಲ್ಕು ಬಾರಿ ಸಭೆ ಸೇರಿ ತಂತಿ, ಕಂಬಗಳು, ವ್ಯವಸ್ಥೆ ಪ್ರತಿಯೊಂದರ ಬಗ್ಗೆಯೂ ಚಾಚೂ ತಪ್ಪದೆ ಕೇಳಿ ಪ್ರಾಮಾಣಿಕವಾದ ಪ್ರಯತ್ನ ಮಾಡಿದಂಥ ವ್ಯಕ್ತಿ ಹಿಂದಿನ ಅಧ್ಯಕ್ಷರು. ಅವರನ್ನೇ ಅಧ್ಯಕ್ಷರನ್ನಾಗಿ ಇಟ್ಟಿದ್ದಾರೆ ನಿಮ್ಮ ಸರ್ಕಾರಕ್ಕೂ ಹೆಸರೂ ಬರುತ್ತಿತ್ತು. ಸಾರ್ವಜನಿಕರಲ್ಲೂ ಶಹಭಾಷ್‌ಗಿರಿ ಬರುತ್ತಿತ್ತು. ಒಳ್ಳೆಯ ಕೀರ್ತಿಯನ್ನು ತಾವು ಪಡೆಯುತ್ತಿದ್ದಿರಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಹಾಗೆ ಮಾಡಿದ್ದರೆ ಇವತ್ತು ಈ ಪರಿಸ್ಥಿತಿ ಬರುತ್ತಿರಲಿಲ್ಲ. ಇಂಥ ಧರಣಿ ಮಾಡುವ ಪರಿಸ್ಥಿತಿ ಬರುತ್ತಿರಲಿಲ್ಲ. ಇವತ್ತು ಇಷ್ಟು ದರವನ್ನು ಏರಿಕೆ ಮಾಡುವ ಪರಿಸ್ಥಿತಿ ಬರುತ್ತಿರಲಿಲ್ಲ. ಅವರು ನಿಜವಾಗಲೂ ತಾಂತ್ರಿಕವಾಗಿ ಪರಿಣಿತರು ಅಲ್ಲದಿದ್ದರೂ ಐಎಎಸ್ ಅಧಿಕಾರಿಯಾಗಿ, ಛೇರ್ಮನ್ ಆಗಿ ಮಾಡಿದಂಥ ಕೆಲಸ ಅಭಿನಂದನೆ ಮಾಡತಕ್ಕಂಥ ಕೆಲಸ. ತಮಗೆ ಹೇಳುತ್ತೇನೆ, ನನಗೇನೂ ಇವರ ಮೇಲೆಯೂ ದ್ವೇಷ ಇಲ್ಲ. ಮೊನ್ನೆ ನಮ್ಮ ಸ್ನೇಹಿತರೊಬ್ಬರು ಶಾಸಕರು ಮನೆಗೆ ದೂರವಾಣಿಯಲ್ಲಿ ಮಾತನಾಡಿದರೆ ನೀವು ಮನೆಯಲ್ಲಿ ಮಾತನಾಡಬಾರದು ಎಂದು ಹೇಳಿದ್ದಾರೆ. ನನಗನಿಸುತ್ತದೆ, ನಾವು ಎಲ್ಲಿ ಮಾತನಾಡಬೇಕು ಶಾಸಕರಾದವರು? ಮನೆಗೆ ಕೊಟ್ಟಿರುವ ಫೋನು ಸರ್ಕಾರದ್ದು, ಕಾರ್ಯಾಲಯದಲ್ಲಿ ಇರುವ ಫೋನು ಸರ್ಕಾರದ್ದು. ಇದೇನೂ ಮಿಲಿಟರಿ ಪ್ರಭುತ್ವವಲ್ಲ. ಇದು ದಂಡಿನ ಆಳ್ವಿಕೆಯಲ್ಲ. ನಾನು ಬಹಳ ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ತಾವು ಅವರಿಗೆ ಎಲ್ಲಿಗೆ ಬೇಕಾದರೂ ಕೊಡಿ. ನನಗೇನೂ ವೈಯಕ್ತಿಕವಾಗಿ ಅವರ ಬಗ್ಗೆ ಯಾವುದೇ ವಿವಾದ ದ್ವೇಷ ಅಸೂಯೆ ಇಲ್ಲ. ಅನೇಕ ಸಾರಿ ಸಿಕ್ಕುತ್ತಿರುತ್ತಾರೆ. ನನ್ನ ಜೊತೆಯಲ್ಲೂ ಮಾತನಾಡುತ್ತಾರೆ. ಅವರ ಬಗ್ಗೆ ನಾನು ಬಹಳ ಗೌರವ ಇಟ್ಟುಕೊಂಡಿದ್ದೇನೆ. ಆದರೆ ಈ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಅವರನ್ನೇ ಖಂಡಿತವಾಗಿ ಮುಂದುವರೆಸುವುದಾದರೆ ನಿಮ್ಮ ಸರ್ಕಾರಕ್ಕೆ ಅಪಾಯ ಎಂದು ನಾನು ಹೇಳುತ್ತೇನೆ, ಮತ್ತೊಮ್ಮೆ ನಿಮ್ಮ ಸರ್ಕಾರ ಬರಬೇಕು ಎನ್ನುವ ಉದ್ದೇಶ ನಿಮಗೆ ಇರುವುದಾದರೆ ಕೆಲವು ಐಎಎಸ್ ಅಧಿಕಾರಿಗಳಿಂದ ನಿಮ್ಮ ಸರ್ಕಾರ ಹೋಗುತ್ತದೆ. ನಿಮ್ಮ ಸರ್ಕಾರ ಅಪಾಯಕ್ಕೆ ಸಿಕ್ಕುತ್ತದೆ ಎನ್ನುವ ಎಚ್ಚರಿಕೆಯನ್ನು ನಾನು ಕೊಡುತ್ತಿದ್ದೇನೆ. ಆದ್ದರಿಂದ ಏನಾದರೂ ಪಿತೂರಿ ನಡೆದಿದೆಯೇ ನಿಮ್ಮ ಸರ್ಕಾರದ ಮೇಲೆ, ಕೆಲವು ಅಧಿಕಾರಿಗಳ ಪಿತೂರಿ ಇದೆ ಎನ್ನುವಷ್ಟು ನಾನು ಯೋಚನೆ ಮಾಡುತ್ತಿದ್ದೇನೆ. ಇದು ಒಳ್ಳೆಯದಲ್ಲ. ವಿದ್ಯುಚ್ಛಕ್ತಿ ಮಂಡಳಿ ಸಾರ್ವಜನಿಕ ವ್ಯವಸ್ಥೆಗೆ ಬರಬೇಕು. ತಮಗೆ ಕಳಕಳಿಯಿಂದ ನಾನು ವಿನಂತಿ ಮಾಡುತ್ತೇನೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ರಾಜ್ಯದ ಭವ್ಯ ಭವಿಷ್ಯತ್ತಿಗೆ ದುಡಿಯುವ ಐಎಎಸ್ ಅಧಿಕಾರಿಗಳು ಇದ್ದಾರೆ. ಅವರು ಮಿಲಿಟರಿ ಪ್ರಭುತ್ವಕ್ಕೆ ಸರಿಯೇ ಹೊರತು ಪ್ರಜಾತಂತ್ರ ವ್ಯವಸ್ಥೆಗೆ ಸರಿಯಲ್ಲ. ಆದ್ದರಿಂದ ವಿದ್ಯುಚ್ಛಕ್ತಿ ಮಂಡಳಿ ಪ್ರಜಾಪ್ರಭುತ್ವ....

ಅಧ್ಯಕ್ಷರು : ಜಿಎಡಿ ಡಿಪಾರ್ಟ್‌ಮೆಂಟ್ ಡಿಸ್ಕಷನ್ಸ್ ಇಟ್ಟುಕೊಂಡಿದ್ದೇವೆ. ಆಗ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಆಗಬಹುದು ಈಗ ತಕ್ಷಣಕ್ಕೆ ನೇರವಾಗಿ ಈ ಇಲಾಖೆಗೆ ಅವರೇ ಬರುತ್ತಾರೆ.

ಅಧ್ಯಕ್ಷರು : ಹೇಳಿದರಲ್ಲಾ.

ಶ್ರೀ ವಾಟಾಳ್ ನಾಗರಾಜ್ : ಸಾಕು ಎಂದರೆ ಬಿಡೋಣ. ನಾನು ಈ ಮಾತನ್ನು ಯಾವ ದೃಷ್ಟಿಯಿಂದ ಹೇಳುತ್ತೇನೆ ಎಂದರೆ ಅನೇಕ ವಿಚಾರಗಳ ಬಗ್ಗೆ ನಾನು ಯಾರನ್ನೋ ಒಬ್ಬರನ್ನು ಕುರಿತು ಮತ್ತೆ ಮತ್ತೆ ಏಕೆ ಹೇಳುತ್ತೇನೆ ಎಂದರೆ ಇದು ಜನಸಾಮಾನ್ಯರಿಗೆ ಬೇಕಾದಂಥ ಅತ್ಯಂತ ನೇರವಾದ ಹತ್ತಿರದ ಇಲಾಖೆ. ಈ ಮಂಡಳಿ ವ್ಯವಸ್ಥೆ ಹದಗೆಡಬಾರದು ಎಂಬ ಒಂದೇ ಪ್ರಾಮಾಣಿಕ ಉದ್ದೇಶದಿಂದ ಈ ಮಾತನ್ನು ಹೇಳುತ್ತೇನೆಯೇ ಹೊರತು ನನಗೇನು ಯಾವ ದ್ವೇಷವಾಗಲಿ, ನನ್ನ ಹತ್ತಿರ ಅಧಿಕಾರಿಗಳಾಗಿದ್ದರು, ನನಗೆ ತೊಂದರೆ ಕೊಟ್ಟಿದ್ದಾರೆ ಎನ್ನುವ ಭಾವನೆಯಿಂದ ಹೇಳುತ್ತಿಲ್ಲ. ಆ ವ್ಯವಸ್ಥೆ ಸರಿಯಾಗಲಿಲ್ಲ ಎಂದರೆ ಅದನ್ನು ಸರಿಪಡಿಸಬೇಕಾದುದು ಸರ್ಕಾರದ ಕರ್ತವ್ಯ. ಆದ್ದರಿಂದ ಸರ್ಕಾರ ಈ ಬಗ್ಗೆ ತೀವ್ರವಾದ ಗಮನವನ್ನು ಕೊಡಬೇಕು. ವಿದ್ಯುಚ್ಛಕ್ತಿ ಮಂಡಳಿಯ ಸಮಗ್ರ ಬೆಳವಣಿಗೆಯ ಬಗ್ಗೆ ಮಂಡಳಿಯ ಸಮಗ್ರ ಇತಿಹಾಸದ ಬಗ್ಗೆ ಮತ್ತೊಂದು ಸಾರಿ ಪ್ರಾಮಾಣಿಕವಾದ ಚರ್ಚೆಗೆ ನಾವು ಅವಕಾಶ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಮಾತನಾಡುವ ವೇಳೆಗೆ ಅವರ ಹೆಸರನ್ನು ಪ್ರಸ್ತಾಪ ಮಾಡಿದರಲ್ಲಾ, that need not go into the records. ಅಧ್ಯಕ್ಷರು ಎಂದು ಹೇಳಿರುವ ಭಾಗವೆಲ್ಲಾ ಇರಲಿ. ಅವರ ಹೆಸರನ್ನು ಏನು ಪ್ರಾಸ್ತಾಪ ಮಾಡಿದ್ದಾರೆ, that need not go into the records. ಮಾನ್ಯ ಶ್ರೀ ರಾಮರೆಡ್ಡಿಯವರೇ, ನೀವು ಮಾತನಾಡಬೇಕೇ? ನಾನು ಏನು ಹೇಳುವುದು ಎಂದರೆ ಇದೊಂದು ಕಸ್ಟಮರಿ ಪ್ರಾಕ್ಟೀಸ್ ಮಾಡಿಕೊಂಡುಬಿಡಬೇಡಿ. ಎಲ್ಲರೂ ನೀವು ಲೈನ್‌ನಲ್ಲಿ ಎದ್ದು ನಿಂತುಕೊಳ್ಳಬೇಕು ಫ್ರೆಂಟ್ ಬೆಂಚ್‌ನಲ್ಲಿರುವವರು ಎಂದರೆ, You have already made your views clear.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಅವರು ಹೇಳಿದ್ದನ್ನು ಹೇಳುವುದಿಲ್ಲ. ಅವರು ಹೇಳಿದ ವಿಷಯಗಳನ್ನು ಹೇಳುವುದಿಲ್ಲ. ನನ್ನ ಅಭಿಪ್ರಾಯ ಬೇರೆ ಇದೆ. ಅದನ್ನು ನಾನು ಹೇಳುತ್ತೇನೆ.

ಅಧ್ಯಕ್ಷರು : ನಾನು ಏನು ಹೇಳುತ್ತೇನೆ ಎಂದರೆ ಇನಿಷಿಯಲಿ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ತಮ್ಮ ವ್ಯೂಸ್‌ನೆಲ್ಲಾ ಸ್ಪಷ್ಟಪಡಿಸಿದ್ದಾರೆ. ನಂತರ ಯಡಿಯೂರಪ್ಪನವರು ಹೇಳಿದ್ದಾರೆ. ಎಲ್ಲೋ ಒಂದು ಕಡೆಗೆ ನೀವು ಸೀಮಿತಗೊಳ್ಳದೇ ಹೋದರೆ ಮತ್ತೆ ಈ ಕಡೆಯಿಂದ ರಿಪ್ಲೈ ಕೊಡಬೇಕಾಗುತ್ತದೆ. ಎಲ್ಲರೂ ಮಾತನಾಡಲೇಬೇಕೆನ್ನುವುದಾದರೆ there is not such rule. ಈಗ ಫ್ರೆಷ್ ಸಬ್‌ಮಿಷನ್ ಏನು ಇರುತ್ತದೆ, ಹೇಳಿ. ಅಲ್‌ಮೋಸ್ಟ್ ಅವರು ಎಕ್ಸಾಸ್ಟ್ ಮಾಡಿಬಿಟ್ಟಿದ್ದಾರೆ. Is there anything new.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ಅದಕ್ಕೇ ಹೇಳಿದ್ದುದು. ನಾನು ಬೇರೆ ವಿಷಯ ಹೇಳುವುದು. ಆ ವಿಷಯ ಹೇಳುವುದಿಲ್ಲ ಎಂದು. ಅವರು ಈಗ ನೀವು ನಿಲುವಳಿ ಸೂಚನೆಯನ್ನು ತಡೆಹಿಡಿದಿದ್ದೀರಿ.

Mr SPEAKER : Exactly. ಮತ್ತೆ ಎಲ್ಲಾ ಏಕೆ ಎಂದು ನಾನು ಹೇಳುವುದು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಒಂದು ನಿಲುವಳಿ ಸೂಚನೆಯನ್ನು ನೀವು ತಡೆಹಿಡಿಯುವುದಕ್ಕೆ...

ಅಧ್ಯಕ್ಷರು : ಇವತ್ತು ಮಧ್ಯಾಹ್ನ ನಮ್ಮ ಪತ್ರಿಕಾ ಸ್ನೇಹಿತರನ್ನು ಮಾತನಾಡೋಣ ಬನ್ನಿ ಎಂದು ಕರೆದು ಅವರ ಜೊತೆಗೆ ಹಾಗೆ ಚರ್ಚೆ ಮಾಡುತ್ತಾ ಕಾಫಿ ಕುಡಿಯುತ್ತಾ ಕುಳಿತಿದ್ದೆವು. They reminded me one thing. ಪಾರ್ಲಿಮೆಂಟ್‌ನಲ್ಲಿ ಎರಡು ನೋ ಕಾನ್‌ಫಿಡೆನ್ಸ್ ಮೋಷನ್ ಆದಾಗ ಸ್ಪೀಕರ್‌ರವರು ಅಲ್ಲಿ ಟೈಮ್ ಹೇಗೆ ಕೊಡುತ್ತಾರೆ ನೋಡಿದಿರಾ ಎಂದು ಹೇಳಿದರು. I must be grateful to them. ಯಾರೇ ಆಗಲಿ ನಮಗೆ ಒಳ್ಳೆಯ ಅಡ್ವೈಸ್ ಕೊಟ್ಟಾಗ ಸಜೆಷನ್ಸ್ ಕೊಟ್ಟಾಗ We must take it seriously. Excepting the major opposition parties, ಐದು ಜನ ಇದ್ದವರಿಗೆ, ಏಳು ಜನ ಇದ್ದವರಿಗೆ, ಒಬ್ಬೊಬ್ಬರು ಇದ್ದವರಿಗೆ not more than five minutes were given. ನಮ್ಮಲ್ಲಿ ಸ್ವಲ್ಪ ಫ್ಲೋರ್ ಲೀಡರ್ಸ್ ಆ ಪಾರ್ಟೀಸ್ ರೆಪ್ರೆಸೆಂಟ್ ಮಾಡುತ್ತಾರೆ ಎನ್ನುವ ಕಾರಣಕ್ಕೆ I am trying to be more lenient. ಅದು ಕಸ್ಟಮರಿ ಪ್ರಾಕ್ಟೀಸ್ ಎಲ್ಲಾ ವಿಚಾರದಲ್ಲೂ ಆಗಬಾರದು. It does't help us. Yes, you can have your say, but only if you have something new to say.

ಶ್ರೀ ಜಿ. ವಿ. ಶ್ರೀ ರಾಮರೆಡ್ಡಿ : ನಿಮಗೆ ಆ ರೀತಿಯ ಅಭಿಪ್ರಾಯ ಇದ್ದರೆ ನಾವು ಮಾತನಾಡುವುದಿಲ್ಲ. ನಾನು ಹೇಳುತ್ತಿರುವುದು ನೀವು ಅವಕಾಶ ಕೊಟ್ಟರೆ ಮಾತ್ರ ಮಾತನಾಡುವುದು.

ಅಧ್ಯಕ್ಷರು : ನನಗೆ ಆ ರೀತಿಯ ಅಭಿಪ್ರಾಯ ಇದೆ ಎಂದು ಹೇಳಿ ನೀವು ಮಾತನಾಡುವುದಿಲ್ಲ ಎಂದು ಹೇಳಿ ಹೆದರಿಸುವುದಕ್ಕೆ ಪ್ರಯತ್ನಪಟ್ಟರೆ ನೀವು ಹಾಗೆ ಕುಳಿತಿರುತ್ತೀರಿ. ನಾನು ಮುಂದುವರಿಸಿಕೊಂಡು ಹೋಗುತ್ತಿರುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಆಯಿತು.

Mr. Speaker : My advice is we must learn. We must learn to save the time, we must learn to make the better use of the time and you must also remember that there are other members in the House. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಪ್ರಮುಖವಾದ ವಿರೋಧ ಪಕ್ಷ ಎಂದು ತಾವು ಹೇಳುತ್ತಿದ್ದೀರಿ, ನಮ್ಮ ದುರಾದೃಷ್ಟಕ್ಕೆ ನಾವು ಒಬ್ಬೊಬ್ಬರೇ ಬಂದಿದ್ದೇವೆ. ಆದ್ದರಿಂದ ನಾವು ಪ್ರಮುಖ ವಿರೋಧ ಪಕ್ಷವಾದಾಗ ಅದನ್ನು ನೀವು ಹೇಳಿ. ನಾನು ಒಬ್ಬನು ಬಂದಿದ್ದೇನೆ. ನಾನು 67 ರಿಂದ ಇಲ್ಲಿಯವರೆಗೂ ನಾನು 40 ವರ್ಷದಿಂದ ಇಲ್ಲಿ ಕುಳಿತಿದ್ದೇನೆ. ನಮಗೇನೂ ಮಾತನಾಡುವುದಕ್ಕೆ ತಾವು ಅವಕಾಶವನ್ನೇ ಕೊಡುವುದಿಲ್ಲ ನೀವು ಒಬ್ಬೊಬ್ಬರೇ ಬಂದಿದ್ದೀರಿ ಎಂದು ಹೇಳಿದರೆ ನಾವು ಏತಕ್ಕೆ ಇರಬೇಕು? ನಾವು ಹೊರಗಡೆ ಹೋಗಿ ಕುಳಿತುಕೊಳ್ಳಬೇಕು ಅಷ್ಟೆ.

ಅಧ್ಯಕ್ಷರು : ಎಷ್ಟು ಸಮಯ ತೆಗೆದುಕೊಳ್ಳಬೇಕು ಎಂದು 30 ವರ್ಷಗಳಿಂದ ಇರತಕ್ಕವರಿಗೆ ನಾನು ಹೇಳಬಾರದು ದಯಮಾಡಿ ಕೇಳಿ ಮಾನ್ಯ ವಾಟಾಳ್ ಅವರೇ.

ಶ್ರೀ ವಾಟಾಳ್‌ನಾಗರಾಜ್ : ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ. ನನ್ನ ಒಂದೇ ಒಂದು ಮಾತಿನಿಂದ ಸುಮಾರು ನಾಲ್ಕು ದಿವಸಗಳ ಕಾಲ ಸದನ ನಡೆಯಲಿಲ್ಲ. ಇದೇ ಸದನದಲ್ಲಿ ಕುಳಿತಿದ್ದ ಮಾನ್ಯ ಬಂಗಾರಪ್ಪನವರು ಇದ್ದರು, ಮಾನ್ಯ ನಂಜೇಗೌಡರೂ ಸಾಕ್ಷೀ ಭೂತವಾಗಿದ್ದಾರೆ. ಸಾಕ್ಷಿ ಕಲ್ಲು ಅಂದರೆ ಹಳ್ಳಿಯಲ್ಲಿ ಸಾಕ್ಷಿ ಅವರನ್ನು ಕೇಳಿ. ನಾನು ತಮಗೆ ಮತ್ತೆ ಮನವಿ ಮಾಡುತ್ತೇನೆ. ನಮ್ಮ ದುರಾದೃಷ್ಟ ನಾವು ಜಾಸ್ತಿ ಜನ ಗೆದ್ದಿಲ್ಲ, ನಾನು ಒಬ್ಬ, ಇವರೂ ಒಬ್ಬರು.

ಶ್ರೀ ಹೆಚ್. ಎಸ್. ನಂಜೇಗೌಡ : ಸಾಕ್ಷಿ ಕಲ್ಲು ಮಾತನಾಡುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಗುಡ್ಡೆ ಮಣ್ಣು ತೆಗೆಯುತ್ತಾರೆ ಅಳತೆಗೋಸ್ಕರ ಸಾಕ್ಷಿ ಎಂದು ಒಂದೊಂದು ಗುಡ್ಡೆ ಬಿಟ್ಟುಕೊಂಡು ಹೋಗುತ್ತಾರೆ. ಅಲ್ಲಿ ಕಲ್ಲು ನೆಡುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಏನಾದರೂ ಆಗಲಿ ನಮ್ಮ ನಾಯಕರ ಬಗ್ಗೆ ಕಲ್ಲು, ಭೂತ ಹೀಗೆಲ್ಲಾ ಹೇಳಬಾರದು.

ಶ್ರೀ ವಾಟಾಳ್‌ನಾಗರಾಜ್ : ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಶಿವಪ್ಪ : ನಾವು ಕಲ್ಲನ್ನೇ ಪೂಜೆ ಮಾಡುವುದು.

ಶ್ರೀ ವಾಟಾಳ್ ನಾಗರಾಜ : ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ. ನಾನೊಬ್ಬ, ನಮ್ಮ ಪಕ್ಷ, ಅಷ್ಟೇ, ಶ್ರೀ ರಾಮರೆಡ್ಡಿ ಅವರು ಒಬ್ಬರೇ ರೈತ ಸಂಘ ಅವರೊಬ್ಬರೇ ಮುನಿಯಪ್ಪ ಅವರೊಬ್ಬರೇ. ನಮ್ಮ ದುರಾದೃಷ್ಟ ನಾವೊಬ್ಬರೇ ಗೆದ್ದು ಬಂದಿದ್ದೇವೆ. ನಮ್ಮ ಪರಿಸ್ಥಿತಿ ಹೀಗೆ ನಾವೆಲ್ಲಾ ಹೋಗೋಣ? ಸದನದಲ್ಲಿ 4-5 ಜನ 35 ವರ್ಷದಿಂದ ಇಲ್ಲೇ ಇದ್ದೇವೆ. ಆದ್ದರಿಂದ ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇವೆ. ತಾವೇನೂ ಬೇಜಾರು ಮಾಡಿಕೊಳ್ಳಬಾರದು. ತಮ್ಮಲ್ಲಿ ಅತ್ಯಂತ ವಿನಯದಿಂದ ಮನವಿ ಮಾಡಿಕೊಳ್ಳುತ್ತೇವೆ. ತಾವು ಪ್ರಮುಖ ಎಂದು ಹೇಳುತ್ತೀರಿ, ನಮ್ಮನ್ನೂ ಪ್ರಮುಖ ಎಂದು ತಾವು ಸೇರಿಸಿಕೊಳ್ಳಬೇಕು.

ಅಧ್ಯಕ್ಷರು : ನಾನು ಹೇಳಿದ ಮಾತಿನ ಅರ್ಥವನ್ನು ತಾವು ತಿಳಿದುಕೊಳ್ಳಬೇಕು. ನನ್ನ ಕಳಕಳಿ ಕೂಡ ತಮಗೆ ಮನದಟ್ಟಾಗುತ್ತದೆ. ಸಮಯವನ್ನು ವಿನಿಯೋಗ ಮಾಡುವ ದೃಷ್ಟಿಯಿಂದ ಸಂಖ್ಯಾ ಬಲವನ್ನು ಗಮನದಲ್ಲಿಟ್ಟುಕೊಂಡು ಸಭಾಧ್ಯಕ್ಷನಾಗಿ ನಾನು ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ಎಲ್ಲೋ ಒಂದು ಕಡೆ ನಾನು ನ್ಯಾಯ ಮಾಡಿದ ಹಾಗೆ ಆಗುವುದಿಲ್ಲ. ಆ ದೃಷ್ಟಿಯಿಂದ ನಾನು ಹೇಳಿದ್ದು ಪ್ರಮುಖವಾದ ವಿಚಾರಗಳು ಬಂದಾಗ ಪ್ರಸ್ತಾಪ ಮಾಡುವುದಕ್ಕೆ ನೀವು ಸಂಖ್ಯಾ ಬಲದಲ್ಲಿ ಕಡಿಮೆ ಇರುವುದರಿಂದ ನೀವು ಮುಖ್ಯ ಅಲ್ಲ ಎಂದು ನಾನು ಹೇಳುವುದಿಲ್ಲ. ನಿಮ್ಮ ಹಿರಿತನವನ್ನು

ಪ್ರಾಧಾನ್ಯತೆಯನ್ನು ನಾನು ಅಲ್ಲಗಳೆಯುವುದಿಲ್ಲ. ನಾನು ತಮ್ಮಲ್ಲಿ ಆಗಲೀ ರೆಡ್ಡಿಯವರಲ್ಲಾಗಲೀ ಪುಟ್ಟಣ್ಣಯ್ಯನವರಲ್ಲಿ ಆಗಲೀ ಬೇರೆ ಎಲ್ಲರನ್ನೂ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಅದೊಂದು ಪದ್ಧತಿ, ಸಂಪ್ರದಾಯ ಎಂದು ಮಾಡುವುದು ಬೇಡ. ಪ್ರತಿ ಸಲ ನಾವೆಲ್ಲರೂ ಎದ್ದು ನಿಂತುಕೊಳ್ಳಬೇಕು, ಮಾತನಾಡಬೇಕು ಎಂದು ಒಂದು ಹೊಸ ವಿಷಯ ಇದ್ದಾಗ ಹೇಳಬೇಕಾದಂತಹ ಸನ್ನಿವೇಶ ಇದ್ದಾಗ, ಅಗತ್ಯತೆ ಇದ್ದಾಗ ದಯಮಾಡಿ ಹೇಳಿ. ಸದನ ನಿಮ್ಮೆಲ್ಲರ ಅಭಿಪ್ರಾಯವನ್ನು ಪಡೆದುಕೊಂಡು ಲಾಭ ಹೊಂದಬೇಕು ಎಂದು ಇದೆ.

ಶ್ರೀ ಬಿ. ವಿ. ಶ್ರೀರಾಮರೆಡ್ಡಿ : ಇನ್ನು ಮುಂದೆ ಎಂತಹ ಸಂಪ್ರದಾಯವನ್ನು ಅಳವಡಿಸಬೇಕು ಎಂದು ನಮಗೆ ಮನವರಿಕೆ ಮಾಡಿಕೊಟ್ಟರೆ ಆ ರೀತಿ ನಾವು ನಡೆದುಕೊಳ್ಳುತ್ತೇವೆ.

ಅಧ್ಯಕ್ಷರು : ಅದಕ್ಕೇ ಹೇಳಿದ್ದುದು. ನನಗೂ ಅನಿಸಿತ್ತು. ಇಲ್ಲಿಯವರೆಗೆ ಮಾಡಿರಲಿಲ್ಲ. ಹೌದು, ನಾನು ಇನ್ನೂ ಹೆಚ್ಚು ಸಮಯವನ್ನು ಸಮರ್ಪಕವಾಗಿ ಬಳಕೆ ಮಾಡಬೇಕು ಎಂದು ಇದೆ. ಮನುಷ್ಯ ಎಂದ ಮೇಲೆ It is a process of learning. You know, a man continutes to learn till he dies.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನೀವು ನಮಗೆ ಎಷ್ಟು ಸಮಯ ನಿಗದಿ ಮಾಡುತ್ತೀರಿ ನಮಗೆ ಅಷ್ಟೇ ಕೊಡಿ, ನಮಗೆ ಹೆಚ್ಚು ಕೊಡುವುದು ಬೇಡ. ನೀವು ಸಂಖ್ಯಾಬಲ ಅಥವಾ ಪಕ್ಷದ ದೃಷ್ಟಿಯಿಂದ ಯೋಚನೆ ಮಾಡುವುದಾದರೆ ನೀವು ಎಷ್ಟು ಸಮಯ ನಿಗದಿ ಮಾಡುತ್ತೀರಿ ಅಷ್ಟು ನಮಗೆ ಕೊಡಿ.

ಅಧ್ಯಕ್ಷರು : ಅದನ್ನು ನಿಮಗೆ ನಾನು ಹೇಳುತ್ತೇನೆ. ಸಮಯ ಯಾವಾಗ ನಿಗದಿ ಮಾಡುತ್ತೇವೆ ಎಂದರೆ ಡಿಮ್ಯಾಂಡ್ಸ್ ಮೇಲೆ ಡಿಸ್ಕಷನ್ ಮಾಡುತ್ತೇವೆ, ಬಜೆಟ್ ಮೇಲೆ ಡಿಸ್ಕಷನ್ ಮಾಡುತ್ತೇವೆ. ಆವಾಗ ಸಮಯವನ್ನು ನಿಗದಿ ಮಾಡುತ್ತೇವೆ. ಇಷ್ಟು ಸಮಯವನ್ನು ಸದನದಲ್ಲಿ ಇಟ್ಟುಕೊಂಡಿದ್ದೇವೆ, ಈ ಸಂಖ್ಯಾ ಬಲಕ್ಕೆ ಇಷ್ಟು ಬರುತ್ತದೆ ಎಂದು ನಿಗದಿ ಮಾಡುತ್ತೇವೆ. These are all general ssues. ಕೆಲವು ಸಂದರ್ಭದಲ್ಲಿ ಕಂಡೋಲೆನ್ಸ್, ರೆಸಲ್ಯೂಷನ್ ಮೂವ್ ಮಾಡುತ್ತೇವೆ. ಕಂಡೋಲೆನ್ಸ್ ೆಸಲ್ಯೂಷನ್ ಮೇಲೆ 30 ಜನ ಮಾತನಾಡಬೇಕು ಎಂದು ಅಪೇಕ್ಷೆ ಪಡುತ್ತಾರೆ. ಆಗ ನನಗೆ ಎಷ್ಟು ಷ್ಟವಾಗುತ್ತದೆ ಹೇಳಿ?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಈ ಪ್ರಶ್ನೆ ಬಂದಿದ್ದು ನಿಲುವಳಿ ಸೂಚನೆಯ ಬಗ್ಗೆ ಮತ್ತೆ ರ್ಚೆ ಆಗುತ್ತಿದೆ. ಅದಕ್ಕೆ ನಾನೂ ಒಬ್ಬ ಸಹಿ ಮಾಡಿರತಕ್ಕವನು. ಅದಕ್ಕೋಸ್ಕರ ಮಾತನಾಡಬೇಕು ಂದು ಹೇಳಿದ್ದು ಅಷ್ಟೇ. ಎಲ್ಲಾ ವಿಷಯದ ಬಗ್ಗೆ ಮಾತನಾಡಬೇಕು ಎಂದು ಹೇಳತಕ್ಕ ಹುಚ್ಚು ಮಗೇನೂ ಇಲ್ಲ.

ಅಧ್ಯಕ್ಷರು : ಹುಚ್ಚು ಯಾರಿಗೆ ಇದ್ದರೂ ನಾನು ಅವರನ್ನು ಇಲ್ಲಿ ಇರಲು ಬಿಡುವುದಿಲ್ಲ. That a different thing. I don't want mad people here. ನಾನು ಎಕ್ಸಾಮಿನ್ ಮಾಡುತ್ತೇನೆ.

ಯಾರಿಗಾದರೂ ಹುಚ್ಚು ಹಿಡಿದಿದೆ ಎಂದು ಅನುಮಾನ ಬಂದರೆ, I will write to doctor. I will allow only saner people to stay here. No mad man is allowed to stay here in this House as Member.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನಾನು ಹೇಳಿದ್ದು ಮಾತನಾಡತಕ್ಕದ್ದು.

ಅಧ್ಯಕ್ಷರು : ಅದೂ ಕೂಡ ಅಷ್ಟೇ. Even that is also a kind of imbalance. ಅದಾಗುವುದಿಲ್ಲ. ಅಬ್‌ನಾರ್ಮ್ಯಲಿಟಿ ಇದ್ದರೆ we will not tolerate. ನಾರ್ಮಲ್ ಆಗಿ ಇರಬೇಕು, ಹೆಲ್ತಿಯರ್ ಆಗಿ ಇರಬೇಕು. Now you can have your say. Please don't make arguments for the sake of argument. You are permitted to say. ಇದೆಲ್ಲಾ ಇದ್ದದ್ದೇ, ಇರುತ್ತದೆ. You are permitted to speak. ಮನೆಯಲ್ಲಿ ಸಿಟ್ಟು ಮಾಡಿದ ಹಾಗೆ ಇಲ್ಲಿ ಮಾಡುವುದಕ್ಕೆ ಆಗುವುದಿಲ್ಲ ಹೇಳಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೆ, ಮೂರು ದಿವಸದಿಂದ ಒಂದು ಬಿಕ್ಕಟ್ಟಿನ ಪರಿಸ್ಥಿತಿ ಉಂಟಾಗಿರತಕ್ಕದ್ದು ವಿದ್ಯುಚ್ಛಕ್ತಿಯ ಬೆಲೆ ಏರಿಕೆ ಪ್ರಶ್ನೆ ಬಂದು. ನನ್ನ ಪ್ರಶ್ನೆ ಇಷ್ಟೇ. ಯಾರು ಮಾಡಿದ ತಪ್ಪಿಗೆ ಯಾರಿಗೆ ಶಿಕ್ಷೆ ಹಾಕುತ್ತಿದೆ ಈ ಸರ್ಕಾರದವರು ಎಂದು. ಈಗ ನೀವು ಬೆಲೆ ಏರಿಕೆ ಮಾಡಬೇಕು ಎಂದು ಇರತಕ್ಕದ್ದು ವಿದ್ಯುಚ್ಛಕ್ತಿ ಮಂಡಲಿಗೆ ಹಣಕಾಸಿನ ಕೊರತೆ ಇದೆ, ಅದನ್ನು ಉಳಿಸಬೇಕು ಎಂದಾದರೆ ಬೆಲೆ ಏರಿಕೆ ಅನಿವಾರ್ಯ ಎಂದು ಹೇಳತಕ್ಕ ವಾದವನ್ನು ಮುಂದಿಟ್ಟು ಬೆಲೆ ಏರಿಕೆಯನ್ನು ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಈ ವಿದ್ಯುಚ್ಛಕ್ತಿ ಮಂಡಳಿ ಇಷ್ಟು ಮಸ್ಥಿತಿಗೆದಿ. ಬರಬೇಕಾದರೆ ಯಾರು ಕಾರಣ ? ಅದಕ್ಕೆ ಸಾಮಾನ್ಯ ಜನರು ಕಾರಣರಾಗಿದ್ದರೆ ನೀವು ಖಂಡಿತ ಅವರಿಗೆ ಹಾಕಿ. ನಾವು ವಿರೋಧ ಮಾಡುವುದಿಲ್ಲ. ಯಾವುದೇ ಸಂದರ್ಭದಲ್ಲಿ ಕೂಡ ವಿರೋಧ ಮಾಡುವುದಿಲ್ಲ. ಈ ವಿದ್ಯುಚ್ಛಕ್ತಿಯನ್ನು ಪುಕ್ಕಟೆ ಕೊಡಿ ಎಂದು ಯಾವ ರೈತರೂ ಸಹ ಯಾವ ಸರ್ಕಾರದ ಮುಂದೂ ಹೇಳಲಿಲ್ಲ. ಯಾವ್ಯಾವುದೋ ರಾಜಕೀಯ ಕಾರಣಗಳಿಗೋಸ್ಕರ ಸರ್ಕಾರ ವಿದ್ಯುಚ್ಛಕ್ತಿಯನ್ನು ಪುಕ್ಕಟೆಯಾಗಿ ಕೊಡುತ್ತೇವೆ ಎಂದು ಹೇಳಿದಂತಹ ಸರ್ಕಾರ ಅವತ್ತು ಕೆಇಬಿಗೆ ಕೊಡಬೇಕಾದಂತಹ ಹಣವನ್ನು ಕೊಡದೇ ಕೆಇಬಿಯನ್ನು ದಿವಾಳಿ ಎಬ್ಬಿಸಿದರು, ಒಂದನೆಯದು. ಎರಡನೆಯದು ಕೆಇಬಿ ಸ್ವತಃ ತಾನೇ ಸ್ವಯಂಕೃತ ಅಪರಾಧದಿಂದ ಮಾಡಿದಂತಹ ತಪ್ಪಿಗೆ ಇವತ್ತು ಕೆಇಬಿ ದಿವಾಳಿಯಾಗಿದೆ ನಾನು ಎರಡು ಮುಖ್ಯ ಅಂಶಗಳನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಮಂತ್ರಿಗಳು ಇದ್ದಾರೆ. ಕೆಇಬಿಗೆ ಕಾನೂನು ಬದ್ಧವಾಗಿ ಮತ್ತು ಅವಶ್ಯಕತೆ ರೀತಿಯಲ್ಲಿ ಇನ್‌ವೆಂಟ್ರಿ ಪ್ರಾಪರ್ಟಿ ಇರಬೇಕಾಗಿರುವುದು 40 ರಿಂದ 50 ಕೋಟಿ ಇರಬೇಕು. ಆದರೆ 200 ಕೋಟಿ ರೂಪಾಯಿ ಇನ್‌ವೆಂಟ್ರಿ ಪ್ರಾಪರ್ಟಿ ಕೆಇಬಿ ಯಲ್ಲಿದೆ. ಇದಕ್ಕೆ ಯಾರು ಹೊಣೆ? ಸಾಮಾನ್ಯ ಜನರು ಇದಕ್ಕೆ ಹೊಣೆಯೇ? ಎರಡನೆಯದು ಇವತ್ತು ಟ್ರಾನ್ಸ್‌ಫಾರ್ಮರ್. ಟ್ರಾನ್ಸ್‌ಫಾರ್ಮರ್ಸ್‌ನಲ್ಲಿ ಎರಡು ರೀತಿಯಾದವುಗಳು ಇವೆ. ಪವರ್ ಟ್ರಾನ್ಸ್‌ಫಾರ್ಮರ್, ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್ಸ್. ಒಂದು ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್‌ಗೆ 50 ಸಾವಿರ ರೂಪಾಯಿಯಾಗುತ್ತದೆ. ಈ 50 ಸಾವಿರ ಬೆಲೆ

ಬಾಳುವ ಒಂದು ಟ್ರಾನ್ಸ್‌ಫಾರ್ಮರ್ಸ್ ಒಟ್ಟು 25 ಸಾವಿರ ಟ್ರಾನ್ಸ್‌ಫಾರ್ಮರ್ಸ್ ಇವತ್ತು ಕರ್ನಾಟಕ ರಾಜ್ಯದಲ್ಲಿದೆ. ಇದು ಸಂಪೂರ್ಣ ವಿಫಲವಾಗಿರುವುದು. ಇದರಿಂದಾಗಿ ಒಂದು ವರ್ಷಕ್ಕೆ 200 ಕೋಟಿ ರೂಪಾಯಿ ಕೆಇಬಿಗೆ ನಷ್ಟವಾಗುತ್ತಿದೆ. ಇದಕ್ಕೆ ಯಾರು ಹೊಣೆ? ಸಾಮಾನ್ಯ ಜನರು ಹೊಣೆಯೇ? ಇದಕ್ಕೆ ಯಾರು ಕಾರಣ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ತಮ್ಮಮುಖಾಂತರ ಕೇಳುವುದು ಏನೆಂದರೆ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದುದು ಎಂದರೆ ಈ ವಿಷಯದಲ್ಲಿ ಇಡೀ ಸದನವೇ ಚರ್ಚೆ ಮಾಡಿ ಹೆಚ್ಚು ಬೆಳಕನ್ನು ಚೆಲ್ಲುವ ಉದ್ದೇಶದಿಂದ ನಮಗೆ ಆ ವಿಷಯದ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಕೇಳಿದ್ದಾರೆ. ಹಾಗೆ ಅವಕಾಶ ಮಾಡಿಕೊಟ್ಟಂಥ ಸಂದರ್ಭದಲ್ಲಿ ನಾವು ದೀರ್ಘವಾಗಿ ಹೇಳುವ ಹಲವಾರು ವಿಷಯಗಳು ಇವೆ, ಇಂಥ ಸಂದರ್ಭದಲ್ಲಿ ವಿವರವಾಗಿ ನಾವು ಚರ್ಚೆ ಮಾಡಿದರೆ ಹೆಚ್ಚು ಪ್ರಯೋಜನವಾಗುತ್ತದೆ. ಮತ್ತು ಸರ್ಕಾರ ನಿರ್ದಿಷ್ಟವಾದ ಉತ್ತರವನ್ನು ಆ ಸಂದರ್ಭದಲ್ಲಿ ಕೊಡಬೇಕಾಗುತ್ತದೆ. ಕಾರಣವೇನೆಂದರೆ ನಾವು ಯಾರೂ ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಉದ್ದೇಶ ಏನೆಂದರೆ ಈ ಸದನದಲ್ಲಿ ಈ ಕೆಇಬಿ ವಿಚಾರವಾದ ಸುದೀರ್ಘವಾದ ಚರ್ಚೆ ಆಗಬೇಕಾದ ಅಗತ್ಯ ಇವತ್ತು ಇದೆ. ನಾವೆಲ್ಲರೂ ಸೇರಿ ಮಾನ್ಯ ಅಧ್ಯಕ್ಷರಲ್ಲಿ ಕೇಳಿಕೊಳ್ಳಬೇಕೆಂದರೆ ಈ ವಿಷಯ ಚರ್ಚೆ ಮಾಡುವುದಕ್ಕೆ ನಮಗೆ ವಿಶೇಷವಾದ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು. ಅಲ್ಲಿಯವರೆಗೂ ಅಷ್ಟಕ್ಕೆ ಸೀಮಿತ ಗೊಳಿಸಿಕೊಳ್ಳೋಣ. ಈ ವಸ್ತುವನ್ನೆಲ್ಲಾ ಇಟ್ಟುಕೊಳ್ಳೋಣ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನಾನು ಎರಡೇ ವಿಷಯ ಹೇಳುವುದು. ಏಕೆ ನಿಲುವಳಿ ಸೂಚನೆ ಒಪ್ಪಬೇಕು ಎಂದು ಹೇಳಲಿಕ್ಕೆ ನಾನು ಹೇಳುತ್ತಿರುವುದು. 200 ಕೋಟಿ ರೂಪಾಯಿ ಈ ನಷ್ಟಕ್ಕೆ ಸಾಮಾನ್ಯ ಜನರು ಜವಾಬ್ದಾರರೇ? ಅದೇ ರೀತಿ ಪವರ್ ಟ್ರಾನ್ಸ್‌ಫಾರ್ಮರ್ಸ್. ಒಂದು ಟ್ರಾನ್ಸ್‌ಫಾರ್ಮರ್ಸ್ 50 ಲಕ್ಷ ರೂಪಾಯಿ. 60 ರಿಂದ 70 ಪರ್ಸೆಂಟ್ ಟ್ರಾನ್ಸ್‌ಫಾರ್ಮರ್ಸ್ ಫೇಲ್ಯೂರ್ ಆಗಿದೆ. ನಮ್ಮ ಕೋಲಾರ ಜಿಲ್ಲೆಯಲ್ಲಿಯೇ ಗುಡಿಬಂಡೆ ಮತ್ತು ಸಾದಲಿ ಸಬ್ ಸ್ಟೇಷನ್‌ನಲ್ಲಿದ್ದಂತಹ ಎರಡು ಟ್ರಾನ್ಸ್‌ಫಾರ್ಮರ್ಸ್ ಒಂದೊಂದು 50 ಲಕ್ಷ ರೂಪಾಯಿ ಬೆಲೆಯದು ಫೇಲ್ಯೂರ್ ಆಗಿದೆ. ಇದಕ್ಕೆ ಸಾಮಾನ್ಯ ಜನ ಜವಾಬ್ದಾರರೇ? ಏಕಾಗಿ ನೀವು ಅವರ ಮೇಲೆ ಹೊರೆ ಹಾಕುತ್ತಿದ್ದೀರಿ? ಮೂರನೆಯ ಅಂಶ ಇದರಲ್ಲಿರತಕ್ಕದ್ದು ಈಗ ನೀವು ತೆರಿಗೆಯನ್ನು ಏರಿಸಿಯೇ ಕೆಇಬಿ ಯನ್ನು ನೀವು ಉಳಿಸಬೇಕು ಎನ್ನುವ ಪ್ರಶ್ನೆಯಾಗಿಯೇ ಇದು ಉಳಿದಿಲ್ಲ. ಇದರ ಹಿಂದೆ ಇನ್ನೂ ಬಹಳ ಗಂಭೀರವಾದ ಅಂಶ ಇದೆ. ಇದನ್ನು ಖಾಸಗೀಕರಣ ಮಾಡಲಿಕ್ಕೆ ನಿರಂತರವಾದಂಥ ಸತತವಾದಂಥ ಪ್ರಯತ್ನ ನಡೆಯುತ್ತಾ ಇದೆ. ಅದಕ್ಕೆ ಎರಡೇ ಎರಡು ಉದಾಹರಣೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಒಂದು, ನ್ಯಾಷನಲ್ ಗ್ರಿಡ್ಸ್ ಯು.ಕೆ.ಯವರಿಗೆ 800 ಕೋಟಿ ರೂಪಾಯಿ ಟೆಂಡರ್ ಈಗಾಗಲೇ ಅಕ್ಸೆಪ್ಟ್ ಆಗಿದೆ. ಇವೆಲ್ಲವೂ ಖಾಸಗೀಕರಣ ಮಾಡಲಿಕ್ಕೆ ಮಾಡುತ್ತಿರುವ ಪ್ರಯತ್ನ. ಈ ಪ್ರಯತ್ನಗಳಿಗೋಸ್ಕರವೇ ಇವತ್ತು ಕೆಇಬಿ ಯನ್ನು ಈ ಸ್ಥಿತಿಗೆ ತಂದಿದ್ದೀರಿ. ಅದಕ್ಕೋಸ್ಕರ ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡಿ ಸಾಮಾನ್ಯ ಜನರು ತಪ್ಪು ಮಾಡಿದರೆ ಅವರ ಮೇಲೆ ಹೊರೆ ಹಾಕುತ್ತೀರಿ ಯಾವುದೇ ತಪ್ಪು ಮಾಡದೇ

ಇರುವ ಸಾಮಾನ್ಯ ಜನರ ಮೇಲೆ 300 ಕೋಟಿ ರೂಪಾಯಿ ಹೊರೆಯನ್ನು ಹಾಕತಕ್ಕಂಥದ್ದು ಯಾವುದೇ ರೀತಿಯಲ್ಲಿ ಯಾವುದೇ ಸರ್ಕಾರಕ್ಕೆ ಸಮರ್ಥನೀಯವಾದ ವಾದವಲ್ಲ. ನೀವು ತಪ್ಪು ಮಾಡದೇ ಇರುವ ಮುಗ್ಧರ ಮೇಲೆ 300 ಕೋಟಿ ಹೊರೆ ಹಾಕತಕ್ಕಂಥದ್ದು ಯಾವುದೇ ಜನಪರವಾಗಿರುವ ಸರ್ಕಾರ ಮಾಡತಕ್ಕಂಥ ಕೆಲಸವಲ್ಲ. ಅದಕ್ಕೋಸ್ಕರ ಈ ಎಲ್ಲಾ ವಿಷಯಗಳನ್ನು ಗಂಭೀರವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು ಎಂದು ನಾನು ಅಷ್ಟೇ ಹೇಳುತ್ತಿರುವುದು.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಸನ್ಮಾನ್ಯ ಅಧ್ಯಕ್ಷರೆ, ಸುಮಾರು 3 ದಿವಸಗಳಿಂದ ಜನರಿಗೆ ವಿದ್ಯುತ್ ಶಾಕ ಕೊಡುತ್ತಿರುವ ಸರ್ಕಾರದ ವಿರುದ್ಧ ಪ್ರಯತ್ನಪಟ್ಟೆವು. ಆದರೆ ಯಾವುದೂ ಫಲಪ್ರದವಾಗಿಲ್ಲ ಎಂದು ನಾವಂತೂ ತಿಳಿದುಕೊಂಡಿದ್ದೇವೆ. ತಾವು ಅತ್ಯಂತ ಜವಾಬ್ದಾರಿಯುತವಾಗಿ ಸಹಕಾರವನ್ನು ಕೊಟ್ಟಿರಿ, ತಮಗೆ ಅಭಿನಂದನೆಗಳನ್ನು ಹೇಳುತ್ತಾ ಸರ್ಕಾರ ನಾವು ಗೆದ್ದೆವು, ವಿರೋಧ ಪಕ್ಷಗಳವರು ಸೋತರು ಎಂದು ಭಾವಿಸಿದ ಹಾಗೆ ಇದೆ. ನಮ್ಮ ಯಾವುದೋ ಒಂದು ನ್ಯಾಯಯುತ ವಾದ ವಿಚಾರವನ್ನು ನಾವು ಒಪ್ಪಿಕೊಂಡಿಲ್ಲ ಎಂಬ ಭಾವನೆ ಅವರಿಗಿದ್ದರೆ ಅದು ತಪ್ಪು. ಪ್ರಜಾಪ್ರಭುತ್ವದಲ್ಲಿ ನಾವು ಇಂಥ ಪ್ರಮುಖವಾದ ವಿಚಾರದಲ್ಲಿ ನಾಲ್ಕು ತಿಂಗಳಿನಲ್ಲಿ ದರವನ್ನು ಏರಿಸಿ ಜನರಿಗೆ ಸರ್ಕಾರ ಅನ್ಯಾಯ ಮಾಡಿದೆ ಎನ್ನುವ ವಿಷಯದಲ್ಲಿ ನೀವೂ ಸೋತಿದ್ದೀರಿ ಅಷ್ಟೇ. ಆದುದರಿಂದ ಈಗಲೂ ಕಾಲ ಮಿಂಚಿಲ್ಲ, ತಾವು ಏನು ನೋಟಿಫಿಕೇಷನ್ ಹೊರಡಿಸಿದ್ದೀರಿ ಅದನ್ನು ವಾಪಸ್ ತೆಗೆದುಕೊಂಡು ಮತ್ತೊಮ್ಮೆ ಚರ್ಚೆ ಮಾಡಿ ಅದನ್ನು ಬದಲಾವಣೆ ಮಾಡಬೇಕೆಂದು ಹೇಳಿ ಮತ್ತೊಮ್ಮೆ ಒತ್ತಾಯ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಉತ್ತರ ಏನೂ ಇಲ್ಲ, ನಾವು ಸುಮ್ಮನೆ ಅಪೀಲು ಮಾಡಿದ್ದೇವೆ ಅಷ್ಟೇ. It has not been debated.

MR. SPEAKER : If it could help me to give my decision.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾವು ಅಪರಾಧ ಮಾಡಿದ್ದೇವೆ ಎಂದು ಈಗ ಅವರಿಗೆ ಮನವರಿಕೆಯಾಗಿದೆ. ಶ್ರೀ ನಂಜೇಗೌಡರು ಹೇಳಿದಂತೆ ಈಗ ಸ್ವಲ್ಪ ಜ್ಞಾನೋದಯವಾಗಿ ಸಮಸ್ಯೆಯ ಗಂಟನ್ನು ಬಿಡಿಸುವ ಪ್ರಯತ್ನವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬಹುದು.

ಅಧ್ಯಕ್ಷರು : ಏನೋ, ಅವರು ನಿಮ್ಮ ಜಿಲ್ಲೆಯವರು. ನಮಗಿಂತ ಚೆನ್ನಾಗಿ ನಿಮಗೆ ಗೊತ್ತಿರುವವರು. ನಾವು ಹೇಗೆ ಹೇಳುವುದು.

+ ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ ತಾವು ವ್ಯಕ್ತಪಡಿಸಿರುವ ಹಾಗೆ ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚೆಯಾಗಿದ್ದು ಸದನದಲ್ಲಿ ಇನ್ನೂ ಹೆಚ್ಚಿನ ಸದಸ್ಯರುಗಳು ಈ ವಿಷಯದ ಬಗ್ಗೆ ಮಾತನಾಡಬೇಕು. ಸರ್ಕಾರ ಉತ್ತರ ಕೊಡಬೇಕು ಎಂದು ಹೇಳಿದ್ದೀರಿ. ಮಾನ್ಯ ವಿರೋಧ ಪಕ್ಷದವರೂ ಅದನ್ನೇ ಹೇಳಿದ್ದಾರೆ, ಶ್ರೀ ಯಡಿಯೂರಪ್ಪನವರೂ ಸಹ ಅದನ್ನೇ ಹೇಳಿದ್ದಾರೆ. ಆದರೆ ಇದರ ಕೋಪ ಏತಕ್ಕೆ ಎಂದು ನನಗೆ ಗೊತ್ತಿಲ್ಲ. ಬಹಳ ಏರಿದ ಧ್ವನಿಯಲ್ಲಿ

ಮಾತನಾಡುತ್ತಾರೆ. ಅವರ ಸ್ವಭಾವವೇ ಹಾಗೋ ಏನೋ ನನಗಂತೂ ಗೊತ್ತಿಲ್ಲ. ಅದನ್ನೇ ಸಮಾಧಾನವಾಗಿ ಹೇಳಬಹುದಾಗಿತ್ತು. ಯಾವ ವಾದದಲ್ಲಿ ತಿರುಳು ಇರುವುದಿಲ್ಲ ಆಗ ಧ್ವನಿ ಏರುತ್ತದೆ, ಅದು ಬಹಳ ಸ್ವಾಭಾವಿಕ. ಅವರಿಗೆ ಏತಕ್ಕೆ ಬಯ್ಯಬೇಕು, ಈ ಸರ್ಕಾರವನ್ನು ಏತಕ್ಕೆ ಟೀಕಿಸಬೇಕು ಎಂದು ಕ್ಲಾರಿಟಿ ಇಲ್ಲದೆ ಇರುವುದರಿಂದ ಸಾಕಷ್ಟು ಆಶೀರ್ವಾದ ಮಾಡಿದ್ದಾರೆ. ಈಗ ನಾನು ಹೇಳುವುದು ಇಷ್ಟೇ, ನಾವು ಇಲ್ಲಿ ಯಾವುದೇ ಪ್ರತಿಷ್ಠೆ ಅಥವಾ ಒಣ ಜಂಬದ ಮೇಲೆ ಹೇಳುತ್ತಿಲ್ಲ. ಇಂಥ ಸಂದರ್ಭಗಳಲ್ಲಿ ಪ್ರತಿ ವರ್ಷ ಕೆಲವು ಇಲಾಖೆಗಳಲ್ಲಿ, ಕೆಲವು ಕಂಪೆನಿಗಳಲ್ಲಿ, ಕೆಲವು ಕಾರ್ಪೊರೇಷನಗಳಲ್ಲಿ ಸ್ವಾಭಾವಿಕವಾಗಿ ಹೆಚ್ಚು ಮಾಡುತ್ತಾರೆ. ತಮಿಳುನಾಡು ಸರ್ಕಾರ ಪ್ರತಿವರ್ಷ ಇಷ್ಟು ಏರಿಸಬೇಕು ಎಂದು ನಿಯಮ ಮಾಡಿಕೊಂಡರೆ. ಹಾಗಯೇ ಆಂಧ್ರದಲ್ಲಿ ಮೊದಲು ಆ ರೀತಿ ಇರಲಿಲ್ಲ. ಈಗ ಅವರೂ ಪ್ರಾರಂಭ ಮಾಡಿದ್ದಾರೆ. ಈಗ ಕೇಂದ್ರದಲ್ಲಿ ಒಂದು ನ್ಯಾಷನಲ್ ಪಾಲಿಸಿ ಇನ್ನೂ ಮಾಡಬೇಕಾಗಿದೆ. ಒಂದೊಂದು ಕಡೆ ಒಂದೊಂದು ದರ ಎಂದು ಮಾಡುವುದಕ್ಕಿಂತ ಸಾಧ್ಯವಾದಷ್ಟು ಒಂದು ಫಾರ್ಮುಲಾ ಮಾಡಬೇಕೆಂಬ ಒಂದು ಸಲಹೆ ಇದೆ. ಅದು ಇನ್ನೂ ನಮಗೆ ಬಂದಿಲ್ಲ. ನಾವು ಏನು ಮಾಡಿದ್ದೇವೆ ಮಾನ್ಯ ಅಧ್ಯಕ್ಷರೆ, sum and substance, ನಾವು ಬಹಳ ಸೋಡಿ ದರದಲ್ಲಿ ವಿದ್ಯುತನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೆವು. ಏತಕ್ಕೆಂದರೆ ಆಗ ವಿದ್ಯುತ್ ಕೊಳ್ಳುವವರೇ ಇರಲಿಲ್ಲ. ಏನಾದರೂ ಮಾಡಿ ವಿದ್ಯುತ್ ಮಾರಿಕೊಳ್ಳಬೇಕು ಎನ್ನುವ ಕಾಲ ಬೇರೆ. ಕಳೆದ 15 ವರ್ಷಗಳಲ್ಲಿ ಆಗಿರತಕ್ಕಂಥ ನಮ್ಮ ಡೆವಲೆಪ್‌ಮೆಂಟ್ ಏನು ಇದೆ, ನಮ್ಮ ಡಿಮ್ಯಾಂಡ್ ಏನಿದೆ ಅದನ್ನು ನಾವು ಇವತ್ತು ಮೀಟ್ ಮಾಡುವುದಕ್ಕೆ ಆಗಿಲ್ಲ, ಟ್ರಾನ್ಸ್‌ಫಾರ್ಮರ್ ಸುಟ್ಟರೆ ಸಾಮಾನ್ಯ ಜನರು ಏತಕ್ಕೆ ಹಣ ಕೊಡಬೇಕು ಎಂದು ರೆಡ್ಡಿಯವರು ಕೇಳುತ್ತಾರೆ. ಟ್ರಾನ್ಸ್‌ಫಾರ್ಮರ್ ಸುಡುವುದು ಅಸಿಸ್ಟೆಂಟ್ ಎಂಜಿನಿಯರ್ ಅವರ ಸ್ವಿಚ್‌ನಿಂದ ಅಲ್ಲ. ಎಷ್ಟು ಲೋಡ್ ಅದಕ್ಕೆ ಇರಬೇಕೊ ಅದರ ಮೂರರಷ್ಟು ಲೋಡ್ ಹೆಚ್ಚಾದಾಗ ಅದು ಸುಡುತ್ತದೆ. ಅದಕ್ಕೆ ರೈತರೂ ಕಾರಣ, ನೌಕರನೂ ಕಾರಣ. ಯಾವುದನ್ನು ಎಷ್ಟು ಮಟ್ಟಕ್ಕೆ ತಡೆಹಿಡಿಯಬೇಕು ಎಂದು ಗೊತ್ತಿಲ್ಲದೆ ಇರುವುದರಿಂದ ಈ ರೀತಿ ಆಗುತ್ತಿದೆ. ಆದರೆ ಅವರು ಹೇಳಿದಂತೆ 25 ಸಾವಿರ ಅಲ್ಲ. ಎಲ್ಲವೂ 50 ಸಾವಿರದ್ದೂ ಅಲ್ಲ. ಅದರಲ್ಲಿ ವ್ಯತ್ಯಾಸ ವಿದೆ. ಅದನ್ನು ಸರಿಪಡಿಸಬೇಕು, ಎಂಬುದನ್ನು ಒಪ್ಪುತ್ತೇನೆ. ಟ್ರಾನ್ಸ್‌ಫಾರ್ಮರ್ ಈ ರೀತಿ ಸುಡಬಾರದು, ಹಾಗೂ ಓಲ್ಟೇಜ್ ವೇರಿಯೇಷನ್ ಆಗಬಾರದು. ನಾವು ಕೊಡುವ ಪವರ್ ಸಪ್ಲೈ ಏನು ಇದೆ ಅದನ್ನು ಎಷ್ಟೇ ಕಡಿಮೆ ಸಮಯ ಕೊಟ್ಟರೂ ಕೂಡ ಉತ್ತಮ ಗುಣಮಟ್ಟ ಇರುವಂಥ ಪವರ್ ಕೊಟ್ಟರೆ ಜನ ಮೆಚ್ಚುತ್ತಾರೆ. ಅದು ಪದೇಪದೆ ಹೋಗುವುದು, ಬರುವುದು ಈ ರೀತಿ ಆಗಬಾರದು. ಈ ಸಮಸ್ಯೆ ಈಗಾಗಲೇ ಜೂನ್ ತಿಂಗಳಿನಿಂದ ಕಡಿಮೆಯಾಗಿದೆ. ನಾವು ಚೆನ್ನಾಗಿ ಮ್ಯಾನೇಜ್ ಮಾಡುತ್ತಿದ್ದೇವೆ. ಜಲಾಶಯಗಳಿಗೆ ನೀರು ಬಂದ ಮೇಲೆ ಈಗ ಪವರ್ ಕಟ್ ಕೂಡ ರೆಡ್ಯೂಸ್ ಮಾಡದ್ದೇವೆ. ಲೋಡ್ ಶೆಡ್ಡಿಂಗ್ ರೆಡ್ಯೂಸ್ ಮಾಡಿದ್ದೇವೆ. ಜನರಾರೂ ಬೈದಿಲ್ಲ. ಎಲ್ಲಾ ಕಡೆ ಹೋದಾಗ ಮೊದಲು ಬೈಸಿಕೊಂಡದ್ದೂ ಉಂಟು. ಈಗ ಯಾರೂ ಹಾಗೆ ಬೈದಿಲ್ಲ.

ಶ್ರೀ ಯು. ಆರ್. ಸಭಾಪತಿ : ಬಿಲ್ ಹೋಗಿಲ್ಲ, ಅದಕ್ಕೆ ಬೈದಿಲ್ಲ.

ಶ್ರೀ ಜೆ. ಹೆಚ್. ಪಟೇಲ್ : ನಿಮ್ಮ ಮನೆಯ ಬಿಲ್ ಎಷ್ಟು, ದಯವಿಟ್ಟು ಹೇಳುತ್ತೀರಾ? you youfself do not know ಬಹಳ ಜನರಿಗೆ ಬಿಲ್ ಗೊತ್ತಿಲ್ಲ. ಶ್ರೀ ಶಿವಪ್ಪನವರಿಗೆ ಗೊತ್ತಿದೆ, ಏಕೆಂದರೆ ಅವರು ಒಂದು ಸಲ ಬಿಲ್ ಕಳುಹಿಸಿದ್ದರು. ಆದ್ದರಿಂದ ಅವರಿಗೆ ಬಿಲ್ ಗೊತ್ತಿದೆ.

ಶ್ರೀ ಯು. ಆರ್. ಸಭಾಪತಿ : ನಿಮ್ಮ ಮನೆಯ ಬಿಲ್ ಎಷ್ಟು ದಯವಿಟ್ಟು ಹೇಳುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ಅವರು ಕೇಳುತ್ತಿರುವುದು ತಮಾಷೆಗಾಗಿ.

ಅಧ್ಯಕ್ಷರು : ಸಭಾಪತಿಯವರೇ, ಇದು ಬಹಳ ತಮಾಷೆ ವಿಷಯ.

ಶ್ರೀ ಎನ್. ರಾಜಣ್ಣ : ಏನು ತಪ್ಪು ಸ್ವಾಮಿ ಇದರಲ್ಲಿ, ನಿಮ್ಮ ಮನೆಯ ಬಿಲ್ ಎಷ್ಟು ಎಂದರೆ ಅದರಲ್ಲಿ ಏನು ತಪ್ಪು?

ಅಧ್ಯಕ್ಷರು : ಸಭಾಪತಿಯವರೆ, ಯಾವಾಗಲೂ ಕೂಡ ಸುಂಸದೀಯ ಕಲಾಪಗಳಲ್ಲಿ ಈ ರೀತಿಯಾಗಿ ಮಾತನಾಡತಕ್ಕಂಥಾದ್ದು ಇರಬೇಕು. ಅದಕ್ಕೆ ಸಿಟ್ಟಾಗಬಾರದು. ಮುಖ್ಯ ಮಂತ್ರಿಗಳು ಕೇಳಿದ ಮಾತಿನ ಒಳ ಅರ್ಥ ಏನೆಂದರೆ ನಾನಾಗಲಿ, ನೀವಾಗಲಿ ಇಲ್ಲಿರುವ ಸದಸ್ಯರುಗಳೆಲ್ಲರೂ ರಾಜಕಾರಣದಲ್ಲಿ ಮಗ್ನರಾಗಿಬಿಟ್ಟಿದ್ದೇವೆ. ನಮಗೆ ಹಾಲಿನ ಬೆಲೆಯೂ ಗೊತ್ತಿಲ್ಲ. ಕರೆಂಟ್ ಬೆಲೆ ಎಷ್ಟು ಬಂತು ಎಂಬುದು ಗೊತ್ತಿಲ್ಲ. ನಮ್ಮ ಕೆಲಸದಲ್ಲಿ ನಾವು ಇರುತ್ತೇವೆ. ಏನೋ ನಾವು ಮಾಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ. ಆ ದೃಷ್ಟಿಯಿಂದ ಅವರು ನಿಮ್ಮ ಮನೆಯ ಬಿಲ್ ಎಷ್ಟು ಎಂದು ತಮಾಷೆಗೆ ಕೇಳಿದರು. ಅದಕ್ಕೆ ನೀವು ಇಷ್ಟು ಸಿಟ್ಟಾಗಬಾರದು. ನೀವು ಕೃಷ್ಣ ಹುಟ್ಟಿದ ಜಾಗದಿಂದ ಬಂದವರು. ಎಲ್ಲೋ ಉಗ್ರ ನರಸಿಂಹನ ಊರಿನಿಂದ ಬಂದವರ ಹಾಗೆ ಆಡುತ್ತೀರಿ. Take it easy;

ಶ್ರೀ ಕುಂಬ್ಳೆ ಸುದರರಾವ್ : ಕೃಷ್ಣ ಹುಟ್ಟಿದ ಊರು ಎಂದರೆ ಜೈಲ್ ಎಂದು ಆಗುತ್ತದೆ. ಹಾಗಾದರೆ ನಾವು ಜೈಲಿನಿಂದ ಬಂದವರೇನು?

ಅಧ್ಯಕ್ಷರು : ಈಗ ಏನಾಯಿತು ಗೊತ್ತೆ? ನೀವು ಉಡುಪಿಯವರ ಹಾಗೆ ಕಾಣಿಸಲಿಲ್ಲ, ನೀವು ಉಗ್ರನರಸಿಂಹನ ಊರಿನಿಂದ ಬಂದವರ ಹಾಗೆ ಕಾಣಿಸಿಕೊಳ್ಳುತ್ತೀರಿ. ಅವರೇ ಕೃಷ್ಣ ಹುಟ್ಟಿದ ಊರಿನಿಂದ ಬಂದವರ ಹಾಗೆ ಕಾಣುತ್ತಾರೆ.

SRI. H. SHIVAPPA : When facts fail, emotion emerges.

SRI M.MALLIKARAJUNA KHARGE : ನಿಮ್ಮ ಪರ ವಾದ ಮಾಡಲು ಎಷ್ಟು ಜನ ಹೊಸ ವಕೀಲರನ್ನು ಹುಟ್ಟಿಸಿದ್ದೀರಿ? ಅವರನ್ನು ಯಾವಾಗ ಅಕಾಮಡೇಟ್ ಮಾಡುತ್ತೀರಿ

MR. SPEAKER : He is trying his best to accommodate all of them.

ಶ್ರೀ ವಾಟಾಳ್ ನಾಗರಾಜ್ : ಅವರು ಸಭಾಪತಿಯವರ ಬಿಲ್ಲು ಕೇಳುವುದಕ್ಕೆ ಬದಲಾಗಿ ನನ್ನ ಮನೆಯ ಬಿಲ್ಲು ಕೇಳಿದ್ದರೆ ನಾನು ಹೇಳುತ್ತಿದೆ. ನನ್ನ ಮನೆಯ ಬಿಲ್ಲು 36 ರೂಪಾಯಿ.

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ : ಹಾಗಾದರೆ ಮೀಟರ್ ಏತಕ್ಕೆ ಫಿಕ್ಸ್ ಮಾಡಬೇಕು?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 36 ರೂ ಅಂದರೆ ಕರೆಂಟ್ ಕದಿಯುವರರು ಇಲ್ಲೇ ಇದ್ದಾರೆ.

ಅಧ್ಯಕ್ಷರು : ನಾವು ಚರ್ಚೆ ಮಾಡುತ್ತಿರುವುದು ಮನೆ ಬಿಲ್ಲಿನ ವಿಚಾರ. ವಾಟಾಳ್ ನಾಗರಾಜ್ ರವರು ಅವರ ಮನೆಯ ಬಿಲ್ಲನ್ನು ಕೇಳಿದ್ದು ಸರಿಯಾಗಿದೆ. ಆದರೆ ನಂಜೇಗೌಡರ ವಿಚಾರದಲ್ಲಿ ಮಾತನಾಡುವ ಹಕ್ಕೇ ಇಲ್ಲ. ಅವರು ಯಾವ ಮನೆಯ ಬಿಲ್ ಎಂದು ಹೇಳುತ್ತಾರೆ? ನಾನು ನೇರವಾಗಿ ನಿಮ್ಮ ಮೇಲೆ ಹೇಳುವುದಕ್ಕೆ ಆಗುವುದಿಲ್ಲ. ಅದಕ್ಕೆ ಅವರ ಮೇಲೆ ಹೇಳಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್ : ನಂಜೇಗೌಡರಿಗೆ ಗೊತ್ತಾಯಿತಾ ನಾವು ಯಾರಿಗೆ ಬಹಳ ಪರಿಚಯವಿದ್ದೇವೆ ಎಂದು.

೫.೧೦. ಪಿ. ಎಂ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಈಗ ಪಟೇಲರು ನಂಜೇಗೌಡರ ಪ್ರದರ್ಶನವಾಗಿ ಹೋಯಿತು ಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ನನಗೆ ಗೊತ್ತಾಗಲಿಲ್ಲ, ಕೆಇಬಿ ಬಿಲ್ ವಾಟಾಳ್ ನಾಗರಾಜರವರಿಗೆ 36 ರೂ ಬಿಲ್ ಬರುತ್ತದೆ ಅಂದರೆ ಡೆಫಿನಿಟಾಗಿ ಫಿಲ್‌ಫರೆಜ್ ಅಲ್ಲೇ ಇದೆ, ಆಮೇಲೆ ನಮ್ಮ ಧರಣದಲ್ಲಿ ಏಕೆ ಬಹಳ ಸಾಫ್ಟ್ ಇದ್ದಾರಲ್ಲಾ ಎನ್ನುವುದಕ್ಕೆ ಈಗ ಗೊತ್ತಾಯಿತು ಡೈರೆಕ್ಟ್ ಲಿಂಕಿದೆ ಅಂತ. ಅದಕ್ಕಾಗಿಯೇ ಹೀಗಾಗಿದೆ ಪರಿಸ್ಥಿತಿ, ನಡೆಯಲಿ.

ಶ್ರೀ ಜೆ. ಎಚ್. ಪಟೇಲ: ಹೀಗೆ ಕಾಲ ಕಳೆದರೆ ಸ್ವಲ್ಪ ಸುಧಾರಣೆಯಾಗಬಹುದೇನೋ ಅಂದರೆ ಏನೂ ಸುಧಾರಣೆಇಲ್ಲ. ಕೆಲವು ವಿಷಯಗಳಲ್ಲಿ ನನ್ನದೇ ಆದ ಧಾಟಿಯಲ್ಲಿ ಮಾತನಾಡುತ್ತೇನೆ ಯಾರನ್ನೋ ಹಗುರ ಮಾಡುವುದಕ್ಕೆ ಎಂದು ಅಲ್ಲ. ಕೆಲವರು ಅದು ಒಳ್ಳೆಯ ಗುಣ ಅಂತಾರೆ ಕೆಲವರಿಗೆ ಅದು ಅರ್ಥವಾಗುವುದಿಲ್ಲ, ನಾನೇನು ಮಾಡಲಿ? ಅಧ್ಯಕ್ಷರೇ, ಅವರು ಹೇಳಿದ ಎಲ್ಲಾ ಪಾಯಿಂಟ್ಸ್‌ಗಳನ್ನು ನಾವೇನೂ ಕೇಳಲೇ ಇಲ್ಲ ಎಂದು ಅಲ್ಲ, ತಮ್ಮ ಚೇಂಬರ್‌ನಲ್ಲಿ ಚರ್ಚೆ ನಡೆದಾಗಲೂ Democracy means governing by discussion ನಾವೆಲ್ಲಾ ಸರ್ವಜ್ಞರು ಎಂದು ಭಾವಿಸಬಾರದು. ಕೆಲವು ಅನುಭವದ ಮೂಲಕ ಕೆಲವು ವಿರೋಧಪಕ್ಷದ ನಾಯಕರು ಹೇಳಿದಾಗ ಕೆಲವು ಕಂಡಾಗ ಒಪ್ಪಿಕೊಳ್ಳುತ್ತೇವೆ. ನಾವು ಯಾವುದಕ್ಕೂ ಒಪ್ಪಿಕೊಳ್ಳುವುದೇ ಇಲ್ಲ ಎಂದು ನಾನು ಯಾವತ್ತೂ ಹೇಳಿಲ್ಲ. ಮೊನ್ನೆನೂ ಅದನ್ನೇ ಹೇಳಿದ್ದುದು, ವಿನಾಕಾರಣ ಸದನದ ಸಮಿತಿ ಎಂದು ಹೋಗುವುದು ಬೇಡ ಎಂದು ಸದನದ ಸಮಿತಿಗಿಂತ ಹೆಚ್ಚಾಗಿ ಪವರ್‌ಫುಲ್ಲಾಗಿ ನೀವೆಲ್ಲಾ ಇರುವಾಗ ಮತ್ತೆ ಸದನಸಮಿತಿ ಏಕೆ ಬೇಕು ಎಂದು ನಾನು ಹೇಳಿದ್ದುದು. ಮತ್ತೊಂದು, ನನ್ನ ಆಲೋಚನೆಯಲ್ಲಿ ನಾನು ರುಜುಮಾರ್ಗದಲ್ಲಿ ಹೋಗದೆ ಇದ್ದಿದ್ದರೆ, ನಾನು ಒಪ್ಪಿಕೊಂಡು ನಮ್ಮವರನ್ನು 10-12 ಮಂದಿ ಹಾಕಿ ನಿಮ್ಮ ಕಡೆಯವರನ್ನು 3 ಜನ

ಹಾಕಿ ಸದನ ಸಮಿತಿ ಮಾಡಬಹುದಾಗಿತ್ತು, ಸದನ ಸಮಿತಿಯಲ್ಲಿ ನಮ್ಮ ಪಾರ್ಟಿಗೆ ನಾವು ಮೆಜಾರಿಟಿ ಇಟ್ಟುಕೊಳ್ಳಬಹುದು. ಆದೇನು ಹೇಳಬೇಕೋ ಅದು ಹೇಳಬಹುದು, ಅದಕ್ಕಿಂತ ಹೆಚ್ಚಾಗಿ ಮೊಯ್ಲಿಯವರೇ ಇಲ್ಲದಿರುವ ಕಮಿಟಿಗೂ ಮೊಯ್ಲಿಯವರೇ ಸ್ವತಃ ನಮ್ಮೆದುರು ಚರ್ಚೆ ಮಾಡುವುದಕ್ಕೂ ವ್ಯತ್ಯಾಸ ಇಲ್ಲವೇ? ಆಟ ಲೀಸ್ಟ್ ಫ್ಲೋರ್ ಲೀಡರ್ಸ್ ಎಲ್ಲಾ ಕುಳಿತು ಮಾತನಾಡೋಣ, ಮೂರೇ ದಿವಸದಲ್ಲಿ ಮುಗಿಸೋಣ ಅಂದರೆ ಅಧಿಸೂಚನೆ ವಿಥ್‌ಡ್ರಾ ಮಾಡಿ ಎನ್ನುತ್ತೀರಿ. ನಾನು ಹೇಳುವುದು ಅದು ಸಿನಿಮಾಟಿಕೆಟೂ ಅಲ್ಲ ಅಥವಾ ಬಹಳ ದೊಡ್ಡ ಡಾಕ್ಯುಮೆಂಟೂ ಅಲ್ಲ, ಸರ್ಕಾರ ನಡೆಸುವಾಗ ಬೇಕೆಂದಾಗ ಇಷ್ಯೂಮಾಡುವುದು ಬೇಡವೆಂದಾಗ ವಿಥ್‌ಡ್ರಾ ಮಾಡುವುದು ಆಗುವುದಿಲ್ಲ. ಕೆಲವು ಸಾರಿ modification is necessary we have to do and we have done. ಇದನ್ನು ಬಹಳ ದೂರ ಚರ್ಚೆ ಮಾಡಿಕೊಂಡು ಹೋಗುವುದು ಬೇಡ. ರೈತರ ಬಗ್ಗೆ ಹೇಳುತ್ತಾ ಅವರೆಲ್ಲಾ ಬಡವರು ಎಂದು ಹೇಳಿದಿರಿ. ಅವರೆಲ್ಲಾ ಬಡವರಲ್ಲ ಅವರ ಮೇಲೆ ನಾವು ಅಂಥಹ ಭಾರಿ ಹೊರೆನೂ ಹಾಕಿಲ್ಲ. ಬಹಳ ಹೊರೆ ಬಿದ್ದಿರುವುದು ಶೇಕಡ 28 ಪರ್ಸೆಂಟ್ ಇರುವ ಎಚ್‌ಟಿ ಮತ್ತು ಎಲ್‌ಟಿ ಕನ್‌ಸ್ಯೂಮರ್ಸ್ ಮೇಲೆ. ನನಗೆ ಅರ್ಥವಾಗುತ್ತದೆ, ಈ ಭಾಗ್ಯಜ್ಯೋತಿಗೆ ಒಂದು ರೂಪಾಯಿ ಮಾಡಿದ್ದೇವೆ. ಒಂದು ಕೋಟಿ ರೂ ಇಡೀ ವರ್ಷಕ್ಕೆರುತ್ತದೆ ಅಂಥವನ್ನು ಒಪ್ಪಿಕೊಳ್ಳುತ್ತೇವೆ, ಉದಾಹರಣೆಗೆ. ಡೊಮೆಸ್ಟಿಕ್ ಕನ್‌ಸಂಷನ್ ಅಂದರೇನು? ಎಇಎಚ್ ಅಂದರೇನು? ಡೊಮೆಸ್ಟಿಕ್ ಕನ್ಸಂಷನ್ ಹೆಸರಿನಲ್ಲಿ ಕನ್‌ಸ್ಯೂಮರ್ ಎಷ್ಟು ಮಾಡಬಹುದು ಆ ವಿವರಗಳನ್ನೆಲ್ಲಾ ಅಧ್ಯಕ್ಷರಿಂದ ಪಡೆದಿದ್ದೇನೆ. 102 ಯೂನಿಟ್ ಉಪಯೋಗ ಮಾಡಿದರೆ 20 ಬಲ್ಪ್ ಉಪಯೋಗಿಸಬಹುದು 4 ಫ್ಯಾನ್ ಉಪಯೋಗಿಸಬಹುದು ಒಂದು ಟಿವಿ ಉಪಯೋಗಿಸಬಹುದು. ಆದರೂ ತಾವೆಲ್ಲಾ ಹೇಳಿದ್ದರಿಂದ, ಮಿಡ್ಲ್‌ಕ್ಲಾಸ್‌ನವರಿಗೆ Now a days Electricity has become essential. ವಿದ್ಯುತ್ ಇಲ್ಲದೆ ನಾವೆಲ್ಲಾ ಹತ್ತಾರು ವರ್ಷವಿದ್ಯುತ್ ನೋಡದೇನೇ ಕಾಲ ಕಳೆದಿದ್ದೇವೆ. ಈಗ ಹಾಗಿಲ್ಲ, ಬೇಕು ಆದರೆ ಅಲ್ಲಿ ನಾವು ಸಮಗ್ರ ಚಿತ್ರ ತೆಗೆದುಕೊಳ್ಳಬೇಕು ತಾನೇ? ಇಡೀ ರಾಜ್ಯದ ಪರಿಸ್ಥಿತಿಯೇನು? ಯಾವ ವರ್ಗದವರ ಮೇಲೆ ಭಾರ ಬೀಳುತ್ತದೆ ಎಂದು ಅದು ಅನಿವಾರ್ಯ. ಶೇಕಡ 28 ಭಾಗ ಶೇಕಡ 60 ರೆವಿನ್ಯೂ ಕೊಡುತ್ತಿದ್ದಾರೆ. ಅವರ ಮೇಲೆ ಬಹಳ ಭಾರಿ ಭಾರ ಬಿದ್ದಿದೆ. ಹಾಗಾಗಿ ಈಗಾಗಲೇ Some Major Industries are trying to run away from Karnataka. ಅದನ್ನೂ ಒಂದು ಕಡೆ ನೋಡಿಕೊಳ್ಳಬೇಕು. ಇದನ್ನೂ ನೋಡಿಕೊಳ್ಳಬೇಕು. ಬೇಕಾದರೆ ಡಿಮಾಂಡ್ಸ್ ಬಂದಾಗ. ಇದರ ಮೇಲೆ ನಾವು ದೀರ್ಘವಾಗಿ ಚರ್ಚೆ ಮಾಡೋಣ. ಆದರೆ ಈಗ ತಾವು ರಾಜ್ಯದ ಹಿತದೃಷ್ಟಿಯಿಂದ ಸದನದ ಗೌರವದ ಹಿತದೃಷ್ಟಿಯಿಂದ, ಮತ್ತು ಅಧ್ಯಕ್ಷರ ಮಾತನ್ನು ನಡೆಸಬೇಕೆನ್ನುವ ಗಂಭೀರತೆಯಿಂದ ತಾವು ಬಂದಿದ್ದೀರಿ. ನಾವೇನೋ ಗೆದ್ದುಬಿಟ್ಟೆವು ನೀವು ಸೋತಿರಿ ಎಂದು ಅಲ್ಲ we have never taken these things. ಇನ್ನೂ ಒಂದು ಮಾತು ಹೇಳುತ್ತೇನೆ, ಖರ್ಗೆಯವರೇ. ವಿರೋಧ ಪಕ್ಷಗಳು 10 ತಪ್ಪು ಮಾಡಲಿ, ಆಡಳಿತ ಪಕ್ಷದವರು ಒಂದು ತಪ್ಪು ಮಾಡಬಾರದು ಎಂದು ಪಾರ್ಲಿಮೆಂಟರಿ ಡೆಮಾಕ್ರಸಿಯ ತತ್ವ ಹೌಸ್ ಆಫ್ ಕಾಮನ್ಸಿನ ದೊಡ್ಡ ಭಾಷಣಕಾರ ಎಡ್ಮಂಡ್ ಬರ್ಕ್‌ನ ಹೇಳಿಕೆ ಇದು. ಆ ಜವಾಬ್ದಾರಿಯಿಂದ ನಾನು ಹೇಳಿದ್ದುದು, ವಿನಾಕಾರಣ ಚರ್ಚೆ

ಮಾಡಿಕೊಳ್ಳುತ್ತಾ ಹೋಗಬಾರದು ಅಧ್ಯಕ್ಷರೇ ತಾವು ಅಪ್ಪಣೆ ಕೊಟ್ಟರೆ ಇದರ ಬಗ್ಗೆ ಯಾವಾಗ ಶಿಬೇಕಾದರೂ ಚರ್ಚೆ ಮಾಡಬಹುದು. ಪುಟ್ಟಣ್ಣಯ್ಯನವರೇ ನಿಲುವಳಿ ಸೂಚನೆ ವಾಪಸ್ ತೆಗೆದುಕೊಂಡು ಆಗಿದೆ, ನಿಲುವಳೀನೂ ಇಲ್ಲ, ಸೂಚನೇನೂ ಇಲ್ಲ. ಈ ವಿಷಯದ ಬಗ್ಗೆ...

SRI M. MALLIKARJUNA KARGE : We are appealing ಇನ್ನು ಕನ್ಸೆಂಟ್.......

SRI J. H. PATEL : I am not at all interfering. Let him decide in whatever way be want. ಆದ್ದರಿಂದ ಈ ಸಬ್ಜೆಕ್ಟ್ ಇಷ್ಟಕ್ಕೆ ಸಾಕು. ಇನ್ನು ಯಾವರೀತಿ ಮಾಡಿಫಿಕೇಷನ್ಸ್ ಮಾಡುತ್ತೇನೆ ಎನ್ನುವುದನ್ನು ನಾನು ಸಭೆಗೆ ತಿಳಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳು ಯಾವರೀತಿ ಮಾಡಿಫಿಕೇಷನ್ ಮಾಡಬೇಕು ಎಂದು ಹೇಳುತ್ತಿದ್ದಾರೆ, ನಿಲುವಳಿ ಸೂಚನೆಗೆ ಕನ್‌ಸೆಂಟ್ ವಿಥ್‌ಹೆಲ್ಡ್ ಮಾಡಿದ್ದೀರಿ, ಕೆಇಬಿ ಡಿಮಾಂಡ್ಸ್ ಟೈಮಿನಲ್ಲಿ ಮಾತನಾಡುವಾಗ ಎಲ್ಲಾ ಸದಸ್ಯರೂ ಭಾಗವಹಿಸುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಸ್ಪೆಸಿಫಿಕಾಗಿ ಕೆಇಬಿ ವಿಷಯವನ್ನೇ ಒಂದು ದಿವಸ ತೆಗೆದುಕೊಂಡರೆ ಇಡೀ ಸದನ, ಆ ಕಡೆಯಿಂದಲೂ ಕೆಲವು ಸಲಹೆ ಬರಬಹುದು, ಇಲ್ಲದಿದ್ದರೆ ಇದಕ್ಕೆ ಮಹತ್ವವೂ ಬರುವುದಿಲ್ಲ ಆದ್ದರಿಂದ ಇದನ್ನು ಡಿಮಾಂಡ್ಸ್ ಜೊತೆ ಮಿಕ್ಸ್ ಮಾಡುವುದು ಬೇಡ.

ಅಧ್ಯಕ್ಷರು : ಈ ವಿಚಾರವನ್ನು ಡಿಮಾಂಡ್ಸ್ ಜೊತೆಯಲ್ಲಿ ಮಿಕ್ಸ್ ಮಾಡುವುದಿಲ್ಲ ಮತ್ತು ಇದರ ಬಗ್ಗೆ ಇನ್ನೂ ವಿವರವಾದ ಚರ್ಚೆ ಅಗತ್ಯವಿದೆ ಎಂದು ನನಗೆ ಮನವರಿಕೆಯಾಗಿದೆ. ಆದ್ದರಿಂದ ನಿಲುವಳಿಸೂಚನೆ ರೂಪದಲ್ಲೇ ತೆಗೆದುಕೊಳ್ಳಬೇಕೆಂದೇನೂ ಇಲ್ಲ. ರಾಜ್ಯದ ಜನತೆ ಹಿತದೃಷ್ಟಿಯಿಂದ ಇನ್ನೂ ಹೆಚ್ಚು ಬೆಳಕು ಚೆಲ್ಲುವ ದೃಷ್ಟಿಯಿಂದ ಹೆಚ್ಚು ಸದಸ್ಯರು ಪಾಲ್ಗೊಳ್ಳಲು ಅವಕಾಶ ಕೊಡುವ ದೃಷ್ಟಿಯಿಂದ ಪ್ರತ್ಯೇಕವಾಗಿ ಇದಕ್ಕಾಗಿ ಸಮಯವನ್ನು ನಿಗದಿಮಾಡಿಕೊಡುತ್ತೇನೆ. It is my responsibility. Please Co-operate with me. Let us not press for this matter to be taken up under Rule 60. I assure the House that we will take-up the subject for a full-fledged discussion, providing an opportunity for all the Members to participate and you can throw more light. I am greatful to you for co-operating with me Now we are in a fix we cannot take-up questions since it is already late and since some of the Ministers have taken my permission and left.

ಅಧ್ಯಕ್ಷರು : ಈಗ ಪ್ರಶ್ನೋತ್ತರ